ಸಂಪುಟ/Volume : 41
ಸಂಚಿಕೆ/Issue : 3
ಪುಟ/Pages : 12
ಬೆಲೆ/Price : ₹ 10/–

ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಡಿಸೆಂಬರ್ 2018 ಮಾಸ ಪತ್ರಿಕೆ

Akhila Karnataka Shikshaka Samachar | December 2018 | Monthly








A Journal of Karnataka State Secondary Teachers' Association

# ಸಂಪಾದಕೀಯ

## ರಾಷ್ಟ್ರದ ಹಿತಕ್ಕಾಗಿ ಶಿಕ್ಷಣ, ಶಿಕ್ಷಣದ ಹಿತಕ್ಕಾಗಿ ಶಿಕ್ಷಕ, ಶಿಕ್ಷಕರ ಹಿತಕ್ಕಾಗಿ ಸಮಾಜ

1965 ರಲ್ಲಿ ಕೆಲವು ಶೈಕ್ಷಣಿಕ ಚಿಂತಕರು, ಅಧ್ಯಾಪಕರು ನಮ್ಮ ಶಿಕ್ಷಣ ಕ್ರಮ, ಶಿಕ್ಷಕರ ಪರಿಸ್ಥಿತಿಗಳ ಬಗ್ಗೆ ಕುಳಿತು ಚರ್ಚಿಸಿದಾಗ ಮೂಡಿ ಬಂದ ಚಿಂತನೆ.

1. ಶಿಕ್ಷಣ, ಶಿಕ್ಷಕ, ವಿದ್ಯಾರ್ಥಿ ಹಾಗೂ ಆಡಳಿತ ಮಂಡಳಿ ಒಂದು ಶೈಕ್ಷಣಿಕ ಕುಟುಂಬ ಇದರಲ್ಲಿ ಸಾಮರಸ್ಯತೆ ಇರಬೇಕು.
2. ಶಿಕ್ಷಕರಿಗೆ ಆಡಳಿತ ಮಂಡಳಿ ಸರ್ಕಾರದಿಂದ ಆಗುವ ಅನ್ಯಾಯಗಳನ್ನು ಪ್ರತಿಭಟಿಸಬೇಕು.
3. ಶಿಕ್ಷಕರು ಕೇವಲ ಸಂಬಳ ಸಾರಿಗೆ ಬಗ್ಗೆ ಚಿಂತಿಸದೆ ಶಿಕ್ಷಣದ ಗುಣಮಟ್ಟದ ಬಗ್ಗೆಯೂ ಚಿಂತಿಸಬೇಕು
4. ನಮ್ಮ ಮಕ್ಕಳಿಗೆ ಭಾರತೀಯ ಶಿಕ್ಷಣ ನೀಡುವ ವಾತಾವರಣ ನಿರ್ಮಿಸಬೇಕು.

ಈ ಮೇಲಿನ ಅಂಶಗಳನ್ನು ಸಾಕಾರಗೊಳಿಸಲು ಒಂದು ಶಿಕ್ಷಕ ಸಂಘಟನೆಯನ್ನು ಕಟ್ಟಬೇಕು ಎಂಬ ನಿರ್ಧಾರದಿಂದ ಪ್ರಾರಂಭವಾದದ್ದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ.

ಎರಡು ವರ್ಷಗಳ ನಂತರ 1967ರಲ್ಲಿ ಸಂಘಟನೆ ವಿದ್ಯುಕ್ತವಾಗಿ ಸರ್ಕಾರದಲ್ಲಿ ನೋಂದಣಿ ಮಾಡಲ್ಪಟ್ಟಿತು. ಮೊದಲ ಅಧ್ಯಕ್ಷರಾಗಿ ಎಮರಿಟಸ್ ಪ್ರೊ. ಎಂ. ವಿ. ಕೃಷ್ಣರಾಯರು ಜವಾಬ್ದಾರಿಯನ್ನು ನಿರ್ವಹಿಸಿದರು.

ಆ ನಂತರ ಪದ್ಮಾವತಿ ವಿಠಲರಾಯರು, ಪ್ರೊ॥ ಕೃ. ನರಹರಿಯವರು ಸಂಘಟನೆಯನ್ನು ಮುನ್ನಡೆಸಿದರು. ಪ್ರಾರಂಭದಲ್ಲಿ ಪ್ರಧಾನ ಕಾರ್ಯದರ್ಶಿಗಳಾಗಿದ್ದವರು ಶ್ರೀ ಮಳ್ಳೂರು ಆನಂದರಾಯರು. ಅವರ ನೇತೃತ್ವದಲ್ಲಿ ಶಿಕ್ಷಕರು ಒಗ್ಗೂಡಿ ಅನ್ಯಾಯದ ವಿರುದ್ಧ ಸಂಘಟಿತರಾಗಬಹುದು ಮತ್ತು ಹೋರಾಟ ನಡೆಸಬಹುದು ಎಂಬುದಕ್ಕೆ ಸಾವಿರಾರು ಶಿಕ್ಷಕರು ನ್ಯಾಷನಲ್ ಹೈಸ್ಕೂಲ್ ಮೈದಾನದಲ್ಲಿ ಸತ್ಯಾಗ್ರಹ ನಡೆಸಿದ್ದು ಸಾಕ್ಷಿಯಾಗಿದೆ.

ಶಿಕ್ಷಕ ಸಂಘವು ಶಿಕ್ಷಕರಲ್ಲಿ ಎಷ್ಟು ಜನಪ್ರಿಯವಾಗಿತ್ತು ಎಂಬುದಕ್ಕೆ ಪದ್ಮಾವತಿ ವಿಠಲರಾಯರು ಎರಡು ಬಾರಿ ಪ್ರೊ॥ ಕೃ ನರಹರಿಯವರು 3 ಬಾರಿ ಬೆಂಗಳೂರು ಶಿಕ್ಷಕ ಕ್ಷೇತ್ರದಿಂದ ವಿಧಾನಪರಿಷತ್ತಿಗೆ ಚುನಾಯಿತರಾಗಿದ್ದೇ ಸಾಕ್ಷಿ.

### ಸಾಧನೆಗಳು

- 1987ರಿಂದ ಚಾಲ್ತಿಯಲ್ಲಿದ್ದ ಶಾಶ್ವತ ಅನುದಾನರಹಿತ ಪದವನ್ನು ಅಳಿಸಿ, ಅನುದಾನರಹಿತ ಶಾಲಾ ಕಾಲೇಜುಗಳಿಗೆ 1994-95 ರ ವರೆಗೆ ಅನುದಾನ ಕೊಡಿಸುವ ಮೂಲಕ 20000 ಶಿಕ್ಷಕರ ಜೀವನಕ್ಕೆ ಆಧಾರವಾಗಿರುವುದು.
- ವೃತ್ತಿ ಶಿಕ್ಷಕರನ್ನು ಖಾಯಂಗೊಳಿಸಲು ಒಪ್ಪಿಸಿ ಯಶಸ್ವಿಯಾಗಿದೆ.
- ಪ್ರೌಢಶಾಲಾ ಸಹಶಿಕ್ಷಕರನ್ನು ಮುಖ್ಯ ಶಿಕ್ಷಕ ಹುದ್ದೆಗೆ ಬಡ್ತಿ ನೀಡುವ ಪ್ರಮಾಣವನ್ನು ಶೇ50ರಿಂದ ಶೇ75ಕ್ಕೆ ಹೆಚ್ಚಿಸುವಂತೆ ಮಾಡಲಾಗಿದೆ.
- ಅನುದಾನಿತ ಶಾಲಾ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಲು ಅನುಮತಿ ಕೊಡಿಸಿರುವುದು ಹಾಗೂ ಅನುದಾನರಹಿತ ಶಿಕ್ಷಕರಿಗೆ ಕನಿಷ್ಠ ವೇತನಕ್ಕೆ ಆಗ್ರಹಿಸಲಾಗಿದೆ.
- ಎಸ್.ಎಸ್.ಎಲ್.ಸಿ, ಪಿ.ಯು.ಸಿ ಫಲಿತಾಂಶ ಕಡಿಮೆ ಆಗಿರುವ ಅನುದಾನಿತ ಶಾಲಾ ಕಾಲೇಜುಗಳ ಸಿಬ್ಬಂದಿಯ ವೇತನವನ್ನು ತಡೆಹಿಡಿಯುವಂತೆ ನೀಡಿದ ಆದೇಶವನ್ನು ಹಿಂಪಡೆಯುವಂತೆ ಮಾಡಲಾಗಿದೆ.
- ಡಿ.ಎಡ್. ಕಾಲೇಜು ಉಪನ್ಯಾಸಕರಿಗೆ ನೂತನ ವೇತನ ಶ್ರೇಣಿ ಕೊಡಿಸಿರುವುದು.
- ಖಾಸಗಿ ಅನುದಾನರಹಿತ ಡಿ.ಎಡ್. ಕಾಲೇಜುಗಳ ಅನುದಾನ ಕೊಡಿಸಿರುವುದು.
- ಮೊರಾರ್ಜಿ ವಸತಿ ಶಾಲೆಗಳಿಗೆ ರೋಸ್ಟರ್ ಹಾಗೂ ಆಧಾರದ ಮೇಲೆ ನೇಮಕಗೊಂಡ ಶಿಕ್ಷಕರನ್ನು ಸಕ್ರಮ ಮಾಡಿಸಿರುವುದು ಖಾಲಿ ಇರುವ ಹುದ್ದೆಗಳ ನೇಮಕಾತಿಗೆ ಕ್ರಮ ಕೈಗೊಳ್ಳುವಂತೆ ಮಾಡಿಸಿರುವುದು.
- 60 ದಶಕದಲ್ಲೇ ಶಿಕ್ಷಕರಿಗೆ ಚೆಕ್ ಮೂಲಕ ವೇತನ ವಿತರಣೆಗೆ ಹೋರಾಡಿ ಯಶಸ್ಸು ಗಳಿಸಿದ್ದು ನಮ್ಮ ಅತ್ಯುನ್ನತ ಸಾಧನೆ.

ಹೀಗೆ ನಮ್ಮ ಹಿರಿಯರು ನಡೆದುಬಂದ ದಾರಿಯನ್ನು ಸ್ತುತಿಸುತ್ತಾ ನೆನೆದರೆ ಸಾಲದು. ಅವರು ಹಾಕಿಕೊಟ್ಟಿರುವ ಮಾರ್ಗದಲ್ಲಿ ನಡೆದು ಉನ್ನತ ಸಾಧನೆಗಳನ್ನು ಮಾಡಬೇಕೆಂಬುದೇ ನಮ್ಮೆಲ್ಲರ ಆಶಯ ರಾಷ್ಟ್ರದ ಹಿತಕ್ಕಾಗಿ ಶಿಕ್ಷಣ, ಶಿಕ್ಷಣದ ಹಿತಕ್ಕಾಗಿ ಶಿಕ್ಷಕ, ಶಿಕ್ಷಕರ ಹಿತಕ್ಕಾಗಿ ಸಮಾಜ ಮಾಡಿ ಎಂಬುದನ್ನು ನಿರೂಪಿಸಬೇಕಾದ ಜವಾಬ್ದಾರಿ ನಮ್ಮ ನಿಮ್ಮೆಲ್ಲರ ಮೇಲಿದೆ.

ಸಂಪಾದಕ

# ಪರಿವಿಡಿ


- ರಾಜ್ಯಮಟ್ಟದ ಶೈಕ್ಷಣಿಕ ಸಮ್ಮೇಳನ 3
- ಸಮ್ಮೇಳನದಲ್ಲಿ ಕೈಗೊಂಡ ನಿರ್ಣಯಗಳು 4
- ಅರಬ್ಬೀ ಸಾಹಿತ್ಯದಲ್ಲಿ ವೇದಗಳ ಪ್ರಶಂಸೆ 6
- ಕಲಿಕೆಯ ದಾರಿಗಳು 7
- 'ಭಾರತಮಾತಾ ಅಸೋಸಿಯೇಷನ್' ಎಂಬ ಆ ಸಂಘಟನೆ! 8
- ರಾಜ್ಯಮಟ್ಟದ ಸಂಸ್ಕೃತ ಶಿಕ್ಷಕರ ಸಮಾವೇಶ 9
- ವಿಷಯ ಪುನಃಶ್ಚೇತನ ಕಾರ್ಯಾಗಾರ 10
- ಚಿತ್ರಸುದ್ದಿ 12

# ರಾಜ್ಯಮಟ್ಟದ ಶೈಕ್ಷಣಿಕ ಸಮ್ಮೇಳನ

ಶಿಕ್ಷಣ ರಾಷ್ಟ್ರದ ಬಲ. ಶಿಕ್ಷಣ ಎಲ್ಲ ಸಮಸ್ಯೆಗಳಿಗೆ ದಿವ್ಯ ಔಷಧವಿದ್ದಂತೆ. ಮೌಲ್ಯಯುತ ಶಿಕ್ಷಣ ನೀಡುವ ಶಿಕ್ಷಕರೇ ನಿಜವಾದ ರಾಷ್ಟ್ರ ರಕ್ಷಕರು ಎಂದು ಧಾರವಾಡ ರಾಮಕೃಷ್ಣ–ವಿವೇಕಾನಂದ ಆಶ್ರಮದ ಶ್ರೀ ವಿಜಯಾನಂದ ಸರಸ್ವತಿ ಸ್ವಾಮೀಜಿ ಹೇಳಿದರು.

ಕೇವಲ ಸರ್ಟಿಫಿಕೇಟ್ ನೀಡುವುದು ಶಿಕ್ಷಣವಲ್ಲ. ಯಾರೋ ಬರೆದಿಟ್ಟ ಇತಿಹಾಸ ಓದುವ ಮೂಲಕ ನಾವು ಆತ್ಮಸ್ವಾತಂತ್ರ್ಯ ಕಳೆದುಕೊಂಡಿದ್ದೇವೆ. ಶಿಕ್ಷಕರು ಪೇಮೆಂಟ್, ಪ್ರಮೋಶನ್ ಹಾಗೂ ಪೆನ್ಶನ್ ಎಂಬ ಮೂರು 'ಪಿ'ಗಳ ಬಗ್ಗೆ ಮಾತ್ರ ಚಿಂತಿಸದೇ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗಾಗಿ ಶ್ರಮಿಸಬೇಕು. ಶಿಕ್ಷಕರ ಒಳಗೆ ದಿವ್ಯತೆ ಸೃಷ್ಟಿಯಾದರೆ ಮಾತ್ರ ವಿದ್ಯಾರ್ಥಿಗಳಲ್ಲಿನ ದಿವ್ಯತೆ ಹೊರತೆಗೆಯಬಹುದು ಎಂದರು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ (ಕೆಆರ್‌ಎಂಎಸ್‌ಎಸ್)ದ ಸುವರ್ಣ ಮಹೋತ್ಸವದ ಅಂಗವಾಗಿ ಇಲ್ಲಿನ ಬಿವಿಬಿ ಮಹಾವಿದ್ಯಾಲಯದ ಬಯೋಟೆಕ್ ಸಭಾಂಗಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ 'ರಾಜ್ಯ ಮಟ್ಟದ ಶೈಕ್ಷಣಿಕ ಸಮ್ಮೇಳನ' ಉದ್ಘಾಟಿಸಿ ಅವರು ಮಾತನಾಡಿದರು.

ವಿಧಾನ ಪರಿಷತ್ ಸದಸ್ಯ ಅರುಣ ಶಹಾಪುರ ಮಾತನಾಡಿ, ರಾಷ್ಟ್ರದ ಹಿತಕ್ಕಾಗಿ ಶಿಕ್ಷಣ, ಶಿಕ್ಷಣದ ಹಿತಕ್ಕಾಗಿ ಶಿಕ್ಷಕ, ಶಿಕ್ಷಕನ ಹಿತಕ್ಕಾಗಿ ಸಮಾಜ ಎಂಬ ಮೂರು ಧ್ಯೇಯಗಳೊಂದಿಗೆ ಮಾಧ್ಯಮಿಕ ಶಿಕ್ಷಕ ಸಂಘ ಕೆಲಸ ಮಾಡುತ್ತಿದೆ. ದೇಶದ ಪ್ರತಿಷ್ಠಿತ ವಿಶ್ವವಿದ್ಯಾಲಯ ಜೆಎನ್‌ಯು ಸೇರಿದಂತೆ ಇತರೆ ವಿವಿಗಳಲ್ಲಿ ಎಂಥವರಿಗೆ ಅವಕಾಶ ಮಾಡಿಕೊಡುತ್ತಿದ್ದೇವೆ ಎಂಬ ಬಗ್ಗೆ ಚಿಂತನೆ ನಡೆಸಬೇಕಿದೆ. ಶಿಕ್ಷಕರ ಹಿತಕ್ಕಿಂತ ಮೊದಲು ಶಿಕ್ಷಣದ ಹಿತ ಕಾಪಾಡಬೇಕಿದೆ. ಹೊಸ ಶಿಕ್ಷಣ ಪದ್ಧತಿ ಜಾರಿಗೊಳಿಸಲು ಕೇಂದ್ರ ಸರ್ಕಾರ ಚಿಂತಿಸುತ್ತಿರುವುದು ಸ್ವಾಗತಾರ್ಹ ಎಂದರು.

ಕೆಎಲ್‌ಇ ಸಂಸ್ಥೆ ನಿರ್ದೇಶಕ ಶಂಕರಣ್ಣ ಮುನವಳ್ಳಿ ಮಾತನಾಡಿ, ಶಿಕ್ಷಣ ಕ್ಷೇತ್ರದಲ್ಲಿ ಹಲವು ಸಮಸ್ಯೆಗಳಿವೆ. ಅವುಗಳಿಗೆ ಪರಿಹಾರ ಕಂಡುಕೊಳ್ಳುವುದು ಹೇಗೆ ಎಂಬುದನ್ನು ಅರಿಯಬೇಕಿದೆ. ಶಿಕ್ಷಕರ ಹುದ್ದೆ ಪವಿತ್ರವಾದುದು. ಶಿಕ್ಷಕರು ನೆಮ್ಮದಿಯಿಂದ ಇದ್ದರೆ ಮಾತ್ರ ಉತ್ತಮ ಶಿಕ್ಷಣ ನೀಡಲು ಸಾಧ್ಯವಾಗುತ್ತದೆ ಎಂದರು.

ಶೈಕ್ಷಣಿಕ ಗುಣಮಟ್ಟ– ಪರಿಕಲ್ಪನೆ– ಸವಾಲುಗಳು ಎಂಬ ವಿಷಯದ ಕುರಿತು ಪ್ರಜ್ಞಾ ಪ್ರವಾಹದ ದಕ್ಷಿಣ ಮಧ್ಯಕ್ಷೇತ್ರ ಸಂಯೋಜಕ ರಘುನಂದನ ಉಪನ್ಯಾಸ ನೀಡಿದರು. ಸಮ್ಮೇಳನದಲ್ಲಿ 'ಒಂದು ರಾಷ್ಟ್ರ, ಒಂದು ಶಿಕ್ಷಣ, ಒಂದು ವೇತನ', 'ಮಾತೃಶಕ್ತಿಯನ್ನು ಗೌರವಿಸುವ ಅವಶ್ಯಕತೆ', 'ರಾಜ್ಯದ ಪ್ರಸ್ತುತ ಶೈಕ್ಷಣಿಕ ಸ್ಥಿತಿ' ಎಂಬ 3 ನಿರ್ಣಯಗಳ ಕರಡು ಪ್ರತಿ ಮಂಡಿಸಲಾಯಿತು.

## ಶಿಕ್ಷಕರಿಗಾಗಿ ಕೆಆರ್‌ಎಂಎಸ್‌ಎಸ್

**ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ಶಿಕ್ಷಕರ ಒಳಿತಿಗಾಗಿ ಕೆಲಸ ಮಾಡುತ್ತಿರುವ ಏಕೈಕ ಸಂಘಟನೆ ಎಂದರೆ ಮಾಧ್ಯಮಿಕ ಶಿಕ್ಷಕ ಸಂಘ. ಹಲವು ಶಿಕ್ಷಕರ ಸಂಘಟನೆಗಳು ಒಡೆದು ಹೋಗಿವೆ. ಆದರೆ, 50 ವರ್ಷವಾದರೂ ಮಾಧ್ಯಮಿಕ ಶಿಕ್ಷಕ ಸಂಘ ಮಾತ್ರ ಒಗ್ಗಟ್ಟಾಗಿ ಶಿಕ್ಷಕರ ಏಳ್ಗೆಗಾಗಿ ಶ್ರಮಿಸುತ್ತಿದೆ ಎಂದು ಎಂಎಲ್‌ಸಿ ಅರುಣ ಶಹಾಪುರ ತಿಳಿಸಿದರು.**

ಸ್ಪರ್ಧಾತ್ಮಕ ಜಗತ್ತಿನಲ್ಲಿ ತಂತ್ರಜ್ಞಾನ ಅತೀ ಅವಶ್ಯ. ಆದರೆ ಅದನ್ನು ದುರ್ಬಳಕೆ ಮಾಡಿಕೊಳ್ಳದೇ ಸರಿಯಾದ ರೀತಿಯಲ್ಲಿ ಬಳಸಿಕೊಳ್ಳಬೇಕು ಎಂದು ಪ್ರಜ್ಞಾಪ್ರವಾಹ ದಕ್ಷಿಣ ಮಧ್ಯಕ್ಷೇತ್ರದ ಸಂಯೋಜಕ ರಘುನಂದನ್ ಹೇಳಿದರು. ಶೈಕ್ಷಣಿಕ ಗುಣಮಟ್ಟ ಸಾಕಷ್ಟು ಸವಾಲುಗಳನ್ನು ಎದುರಿಸುತ್ತಿದೆ. ತಂತ್ರಜ್ಞಾನ ಬಳಕೆ ಮಿತವಾಗಿರಬೇಕು. ಉಪಯುಕ್ತತೆಗೆ ಪೂರಕವಾಗಿರಬೇಕು. ಅನಗತ್ಯವಾಗಿ ತಂತ್ರಜ್ಞಾನದ ಬಳಕೆ ಮಾಡಿದರೆ ಅಪಾಯವೇ ಹೆಚ್ಚು ಎಂದು ಸಲಹೆ ನೀಡಿದರು.

ವ್ಯಾಪಾರ ಮತ್ತು ಧರ್ಮಗಳು ಒಂದಕ್ಕೊಂದು ಹೋಲಿಕೆಯಾಗುವುದಿಲ್ಲ. ವ್ಯಾಪಾರದಲ್ಲಿ ಧರ್ಮವಿರಬೇಕು. ಧರ್ಮದಲ್ಲಿ ವ್ಯಾಪಾರವಿರಬಾರದು. ಪಾಲಕರು, ಶಿಕ್ಷಕರು, ಸಮುದಾಯ ಹಾಗೂ ಸರಕಾರಗಳು ಸೇರಿಕೊಂಡು ಪರಿವಾರವಾಗಿ ಶೈಕ್ಷಣಿಕ ವ್ಯವಸ್ಥೆ ಸುಧಾರಣೆಗೆ ಮುಂದಾಗಬೇಕು ಎಂದು ತಿಳಿಸಿದರು.

ವಿಧಾನ ಪರಿಷತ್ ಸದಸ್ಯ ಅ. ದೇವೇಗೌಡ, ಮಹಾಪೌರ ಸುಧೀರ ಸರಾಫ, ಶಿಕ್ಷಣ ಇಲಾಖೆ ಉಪನಿರ್ದೇಶಕ ಲಕ್ಷ್ಮಣ ಪಾಟೀಲ, ಕನಕದಾಸ ಶಿಕ್ಷಣ ಸಮಿತಿ ಉಪಾಧ್ಯಕ್ಷ ಶಾಂತಣ್ಣ ಕಡಿವಾಲ, ವಿಧಾನ ಪರಿಷತ್ ಮಾಜಿ ಸದಸ್ಯರಾದ ಬಾಲಕೃಷ್ಣ ಭಟ್, ಸುಶೀಲ ನಮೋಶಿ, ಗಣೇಶ ಕಾರ್ಣಿಕ್, ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ಸಂರಕ್ಷಕ ಕೃ. ನರಹರಿ, ಶಿವಾನಂದ ಸಿಂಧನಕೇರಾ, ವಿಶ್ರಾಂತ ಕುಲಪತಿ ಜಗದೀಶ ಸಿಂಘಾಲ, ಕೆಆರ್‌ಎಂಎಸ್‌ಎಸ್ ರಾಜ್ಯಾಧ್ಯಕ್ಷ ಸಂದೀಪ ಬೂದಿಹಾಳ, ಪ್ರೊ. ರಘು ಅಕಮಂಚಿ, ಎಬಿಆರ್‌ಎಸ್‌ಎಂ ಸಹಕಾರ್ಯದರ್ಶಿ ಮಮತಾ ಡಿ. ಕೆ. ಸೇರಿದಂತೆ ಇತರರು ಉಪಸ್ಥಿತರಿದ್ದರು.

26 ಜಿಲ್ಲೆಗಳಿಂದ ಶಿಕ್ಷಣ ತಜ್ಞರು, ಶಿಕ್ಷಕರು ಸೇರಿದಂತೆ ಸುಮಾರು 700 ಜನರು ಪಾಲ್ಗೊಂಡಿದ್ದರು. ●

# ರಾಜ್ಯ ಮಟ್ಟದ ಶೈಕ್ಷಣಿಕ ಸಮ್ಮೇಳನದಲ್ಲಿ ತೆಗೆದುಕೊಂಡ ನಿರ್ಣಯಗಳು

## ನಿರ್ಣಯ-1

## ಒಂದು ರಾಷ್ಟ್ರ ಒಂದು ಶಿಕ್ಷಣ ಒಂದು ವೇತನ

ರಾಷ್ಟ್ರ ಎಂದರೆ ಬೆಟ್ಟ, ಗುಟ್ಟ, ಸಮುದ್ರ, ನದಿ, ಮಣ್ಣು ಅಲ್ಲ. ಅದು ನಮ್ಮ ಭಾವನೆ. ಹಾಗಾಗಿ ರಾಷ್ಟ್ರ ಹಿರಿತನದಲ್ಲಿ ಅಚಲ ವಿಶ್ವಾಸ. ರಾಷ್ಟ್ರೀಯ ವಿಧೇಯತೆಯಿಂದ ಯಾವಾಗ ಭಾವನೆಗಳು ತುಂಬಿ ತುಳುಕುತ್ತವೆಯೋ ಮತ್ತು ರಾಷ್ಟ್ರೀಯ ಹಿತಕ್ಕಾಗಿ ಅವುಗಳು ನಿರ್ದೇಶಿಸಲ್ಪಡುತ್ತವೆಯೋ ಆಗ ರಾಷ್ಟ್ರೈಕ್ಯ ರೂಪತಾಳುತ್ತದೆ. ಅಂತೆಯೇ ನಾವು ಒಂದೇ ನೆಲಕ್ಕೆ ಸೇರಿದವರೆಂಬ ಭಾವನೆ ನಮ್ಮ ಪ್ರಕ್ರಿಯೆಗಳಿಂದ ವ್ಯಕ್ತವಾಗುತ್ತದೆ. ಆಗ ನಾವು ಭಾವೈಕ್ಯತೆಯಿಂದ ರಾಷ್ಟ್ರೈಕ್ಯವನ್ನು ಸಾಧಿಸುತ್ತೇವೆ ಮತ್ತು ಅದನ್ನು ನಾವು ಈಗಾಗಲೇ ಸಾಧಿಸಿದ್ದೇವೆ. ಹಾಗಾಗಿ ನಾವು ಒಂದು ರಾಷ್ಟ್ರ.

ಡಾ|| ರಾಧಾಕೃಷ್ಣನ್‌ರ ಅಭಿಪ್ರಾಯದಂತೆ ರಾಷ್ಟ್ರೈಕ್ಯವನ್ನು ಇಟ್ಟಿಗೆ ಗಾರೆಯಿಂದ ಕಟ್ಟಲಾಗುವುದಿಲ್ಲ. ಜನರ ಮನ ಮತ್ತು ಹೃದಯದಲ್ಲಿ ಅದು ಮೌನವಾಗಿ ಬೆಳಗಬೇಕು. ಹಾಗೆ ಮಾಡುವ ಒಂದೇ ವಿಧಾನವೆಂದರೆ ಶಿಕ್ಷಣ ವಿಧಾನ. ಅಂತೆಯೇ ಇಂದು ಶಿಕ್ಷಣ ಕೇಂದ್ರ, ರಾಜ್ಯಗಳ ಮೂಲಕ ಸರಕಾರಿ ಸಾರ್ವಜನಿಕ ಶಾಲೆಗಳು, ಖಾಸಗಿ ಶಾಲೆಗಳು, ಪಬ್ಲಿಕ್ ಶಾಲೆಗಳು, ಕೇಂದ್ರೀಯ ಶಾಲೆಗಳು, ಸೈನಿಕ ಶಾಲೆಗಳು, ನವೋದಯ ಶಾಲೆಗಳು, ವಸತಿ ಶಾಲೆಗಳು, ಮೊರಾರ್ಜಿ ಶಾಲೆಗಳು ಇತ್ಯಾದಿ ಬೇರೆ ಬೇರೆ ಪ್ರಕಾರಗಳಲ್ಲಿ ಪ್ರಾಥಮಿಕ, ಮಾಧ್ಯಮಿಕ ಹಾಗೂ ಪದವಿ ಪೂರ್ವ ಶಿಕ್ಷಣ ರಾಷ್ಟ್ರದ ತುಂಬ ಪ್ರಸಾರವಾಗುತ್ತಿದೆ. ಅದನ್ನು ಒಟ್ಟು ಇಡೀ ಒಂದು ರಾಷ್ಟ್ರದ ಶಿಕ್ಷಣವಾಗಿ ಒಂದೇ ಛತ್ರದಡಿಯಲ್ಲಿ ಬರುವಂತೆ ಒಂದು ರಾಷ್ಟ್ರದ ಶಿಕ್ಷಣವಾಗಿ ಪುನಃ ರೂಪಿಸಬೇಕು. ಹೀಗಾದಾಗ ರಾಷ್ಟ್ರದ ಶಿಕ್ಷಣ ಏಕತೆ ಮತ್ತು ರಾಷ್ಟ್ರೀಯತೆಯ ಭಾವನೆಗೆ ಇಂಬುಗೊಟ್ಟಂತಾಗಿ ಮುಂದಿನ ಪೀಳಿಗೆಯ ಮನಸ್ಸಿನಲ್ಲಿ ನಿಜರಾಷ್ಟ್ರೀಯತೆಯ ಉತ್ಸಾಹ ಉಕ್ಕಲು ಸಾಧ್ಯವಾಗುತ್ತದೆ. ಆಗ 'ಒಂದು ರಾಷ್ಟ್ರ ಒಂದು ಶಿಕ್ಷಣ'ದ ಕಲ್ಪನೆಗೆ ಬೆಲೆ ಬರುತ್ತದೆ.

ವ್ಯಕ್ತಿಯ ವ್ಯಕ್ತಿತ್ವದ ಅಭಿವೃದ್ಧಿಗಾಗಿಯೇ ಇರುವ ಏಕೈಕ ವೃತ್ತಿಯೇ ಶಿಕ್ಷಕ ವೃತ್ತಿ. ಇದು ಶಿಕ್ಷಣದ ಪ್ರಗತಿಗೆ ಕೀಲಿಕೈಯಿದ್ದಂತೆ. ಇಂತಹ ಶಿಕ್ಷಕ ಭಾರತೀಯ ಸಂದರ್ಭದಲ್ಲಿ ಕೇಂದ್ರ ರಾಜ್ಯ ಹಾಗೂ ಖಾಸಗಿ ಸಂಸ್ಥೆಗಳ ಬೇರೆ ಬೇರೆ ಪ್ರಕಾರದ ಶಿಕ್ಷಣದ ಕ್ರಮಗಳಲ್ಲಿ ಅವರೂ ಕೂಡ ಹರಿದು ಹಂಚಿ ಹೋಗಿದ್ದಾರೆ. ಪರಿಣಾಮ ಅವರ ವೇತನ, ಭತ್ಯೆಗಳ ವ್ಯತ್ಯಾಸಗಳು, ಅಂತರಗಳು ಇದ್ದು ಅವರಲ್ಲಿ ಸಾಕಷ್ಟು ಅತೃಪ್ತಿ ಇದೆ. ಪ್ರಯುಕ್ತ ಇಡೀ ರಾಷ್ಟ್ರ ಮಟ್ಟದಲ್ಲಿ ಪ್ರಥಮ ದರ್ಜೆ ಕಾಲೇಜುಗಳ ಅಧ್ಯಾಪಕರುಗಳನ್ನು ಯು.ಜಿ.ಸಿ ಅಡಿಯಲ್ಲಿ, ತಾಂತ್ರಿ ಶಿಕ್ಷಣದ ಅಧ್ಯಾಪಕರುಗಳನ್ನು ಎ.ಆಯ್.ಸಿ.ಟಿ.ಇ ಯಡಿಯಲ್ಲಿ ಸೇರಿಸಿ ಒಂದೇ ಮಾದರಿಯಲ್ಲಿ ಇಟ್ಟುಕೊಳ್ಳಲಾಗಿದೆಯೋ, ಅದೇ ಮಾದರಿಯಲ್ಲಿ ಇಡೀ ರಾಷ್ಟ್ರದ ಪ್ರಾಥಮಿಕ, ಮಾಧ್ಯಮಿಕ, ಪದವಿಪೂರ್ವ ಶಿಕ್ಷಣದ ಕೇಂದ್ರ ಧನಸಹಾಯ ಆಯೋಗವನ್ನು ಸ್ಥಾಪಿಸುವ ಮೂಲಕ ಅದರ ಅಡಿಯ ಅಧ್ಯಾಪಕರುಗಳಿಗೆ ವೇತನಭತ್ಯೆಗಳು ಏಕ ರೀತಿಯಲ್ಲಿಯೇ ಇರಲಿ. ಆಗ ಒಂದು ದೃಢ ಮತ್ತು ಐಕ್ಯತೆಯ ದೇಶದ ನಿರ್ಮಾಣಕ್ಕೆ ಸಾಮಾಜಿಕ ಹಾಗೂ ರಾಷ್ಟ್ರೀಯ ಐಕ್ಯತೆಗೆ ಹಾಗೂ ಎಲ್ಲ ಸಾಮಾಜಿಕ ವರ್ಗಗಳನ್ನು ಮತ್ತು ಗುಂಪುಗಳನ್ನು ಒಂದು ಗೂಡಿಸಿ ತನ್ಮೂಲಕ ಭಾತೃತ್ವದ ಹಾಗೂ ಐಕ್ಯತೆಯ ಸಮಾಜವನ್ನುಂಟು ಮಾಡುವ ನಿಟ್ಟಿನಲ್ಲಿ "ಒಂದು ರಾಷ್ಟ್ರ, ಒಂದು ಶಿಕ್ಷಣ, ಒಂದು ವೇತನ" ನೀತಿ ಜಾರಿಗೆ ಬರುವಂತೆ ಸರಕಾರ ಕ್ರಮಕೈಗೊಳ್ಳಬೇಕು ಎಂದು ಈ ವೇದಿಕೆಯ ಮೂಲಕ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಆಗ್ರಹಿಸುತ್ತದೆ.

## ನಿರ್ಣಯ-2

## ಮಾತೃಶಕ್ತಿಯನ್ನು ಗೌರವಿಸುವ ಅವಶ್ಯಕತೆ

ಅನೇಕ ವಿಚಾರಧಾರೆಗಳು ತಮ್ಮ ತಮ್ಮ ಪೂರ್ವಾಗ್ರಹ ಮತ್ತು ವಾದಗಳ ದೃಷ್ಟಿಯಿಂದ ಸ್ತ್ರೀಯನ್ನು ಅನೇಕ ರೀತಿಯಲ್ಲಿ ವಿಶ್ಲೇಷಿಸುತ್ತಿವೆ. ಆಧುನಿಕ ಪಾಶ್ಚಾತ್ಯ ಚಿಂತನೆ ಸ್ತ್ರೀಯನ್ನು ಪುರುಷರಿಗಿಂತ ಕೆಳಹಂತದಲ್ಲಿ ನೋಡುತ್ತದೆ. ಇನ್ನೊಂದೆಡೆ ಕಮ್ಯುನಿಸಂ ಪ್ರತಿ ವಿಷಯವನ್ನು ವರ್ಗ ಸಂಘರ್ಷದ ದೃಷ್ಟಿಯಲ್ಲಿ ನೋಡುತ್ತದೆ. ಇವೆಲ್ಲವುಗಳ ಮಧ್ಯದಲ್ಲಿಯೂ ಭಾರತೀಯ ಚಿಂತನೆ ಸಮಗ್ರ ದೃಷ್ಟಿಯುಳ್ಳದ್ದಾಗಿದೆ. ಇಲ್ಲಿ ಸ್ತ್ರೀ-ಪುರುಷರು ಭಿನ್ನರಲ್ಲ, ಒಬ್ಬರಿಗೊಬ್ಬರು ಪೂರಕವಾಗಿದ್ದು, ಪರಸ್ಪರ ಅವಲಂಬಿತರಾಗಿದ್ದಾರೆ. ಸ್ತ್ರೀ-ಪುರಷರಿಬ್ಬರ ಸಾಮರಸ್ಯದಿಂದ ಮಾತ್ರ ಪರಿಪೂರ್ಣತೆಯನ್ನು ಪಡೆಯಲು ಸಾಧ್ಯ. ಅರ್ಧನಾರೀಶ್ವರ ತತ್ವವೂ ಸಹ ಇದನ್ನೇ ಬಿಂಬಿಸಿದೆ. ವಿಶ್ವದ ಅನ್ಯ ಧರ್ಮಗಳಲ್ಲಿ ಭಗವಂತನನ್ನು ಪುರುಷನನ್ನಾಗಿ ಮಾತ್ರ ಪ್ರಾರ್ಥಿಸುತ್ತಾರೆ. ಆದರೆ ಭಾರತೀಯತೆಯ ವಿಶೇಷತೆಯೇನೆಂದರೆ ಶಿವನಲ್ಲಿಯೂ ಸಹ ಮಾತೃಸ್ವರೂಪವನ್ನು ನೋಡಲಾಗುತ್ತದೆ. ಮಾತೃಶಕ್ತಿಯ ಈ ಆರಾಧನೆ ಬಹಳ ವೈಶಿಷ್ಟ್ಯಪೂರ್ಣವಾಗಿರುವಂತಹುದು.

ವೇದಕಾಲದಲ್ಲಿ ಆಚಾರ್ಯರು ಸಹ ದೀಕ್ಷಾ ಸಮಯದಲ್ಲಿ ನೀಡುತ್ತಿದ್ದ ಮೊದಲನೇ ಉಪದೇಶವೇ "ಮಾತೃದೇವೋಭವ" ನಂತರ ಪಿತೃದೇವೋಭವ ಮತ್ತು ಆಚಾರ್ಯದೇವೋಭವ. "ಯತ್ರ ನಾರ್ಯಸ್ತು ಪೂಜ್ಯಂತೆ ರಮಂತೆ ತತ್ರ ದೇವತಃ" ಎಂಬ ಉಕ್ತಿಯಲ್ಲಿ ಹತ್ತು ಉಪಾಧ್ಯಾಯರು ಒಬ್ಬ ಉಪಾಧ್ಯಾಯಿನಿಗೆ ಸಮವೆಂದು ಹೇಳಲಾಗಿದೆ.

ಮಾತೃ ಎಂಬ ಶಬ್ದವೇ ಭಾರತೀಯತೆಯ ಪವಿತ್ರಮಯ ಶಬ್ದವಾಗಿದೆ. ಭಾರತದಲ್ಲಿ ಪಾಶ್ಚಿಮಾತ್ಯರಂತೆ ಸ್ತ್ರೀಯನ್ನು ಭೋಗದ ವಸ್ತುವನ್ನಾಗಿಸದೇ ಪೂಜ್ಯ ಭಾವನೆಯಿಂದ ನೋಡಲಾಗುತ್ತದೆ. "ಯಾವುದಾದರೂ ದೇಶದ ಪ್ರಗತಿಯ ಮಾನದಂಡವನ್ನು ಸ್ತ್ರೀಯರೊಡನೆ ವ್ಯವಹರಿಸುವ ರೀತಿಯನ್ನು ನೋಡಿ ತಿಳಿಯಬಹುದಾಗಿದೆ" ಎಂಬುದು ಕೇವಲ ಸ್ವಾಮಿ ವಿವೇಕಾನಂದರ ಹೇಳಿಕೆಯಲ್ಲ, ನಮ್ಮ ಸನಾತನ ಸಂಸ್ಕೃತಿಯ ಸ್ವಾಭಾವಿಕತೆಯಾಗಿದೆ. ಸ್ತ್ರೀಯ ಪೂರ್ಣತ್ವವು ಪ್ರಾಚೀನ ಕಾಲದಿಂದ ಇಲ್ಲಿಯವರೆಗೂ ಭಾರತೀಯ ಉನ್ನತ ಆದರ್ಶಗಳನ್ನೊಳಗೊಂಡ ಸ್ತ್ರೀರತ್ನಗಳಿಂದ ವ್ಯಕ್ತವಾಗಿದೆ. ಇವರೆಲ್ಲಾ ತಮ್ಮ ಉತ್ತಮ ಕೆಲಸ ಹಾಗೂ ಸೇವೆಯಿಂದ ನಾರಿ ಕುಲದ ಹೆಸರನ್ನೇ ಉಜ್ವಲಗೊಳಿಸಿದ್ದಾರೆ. ಗಾರ್ಗಿ, ಮೈತ್ರೇಯೀಯಂತಹ ವಿದೂಷಿಯರು,

ಪುಟ 5 ಕ್ಕೆ ➢

➢ ಪುಟ 4 ರಿಂದ..... ನಿರ್ಣಯಗಳು...

ಶೌರ್ಯಕ್ಕಾಗಿ ವೀರಮಾತೆ ಜೀಜಾಬಾಯಿ, ರಾಣಿ ಲಕ್ಷ್ಮೀಬಾಯಿ, ಸಮಾಜಸುಧಾರಣೆಯಲ್ಲಿ ಸ್ತ್ರೀ ಶಿಕ್ಷಣಕ್ಕೆ ಸಾವಿತ್ರಿಬಾಯಿ ಫುಲೆ ಮುಂತಾದವರು ತೇಜಸ್ವಿ ಸ್ತ್ರೀಯರಾಗಿದ್ದು, ಇವೆರೆಲ್ಲರ ಕಾರ್ಯಗಳು ಅನುಕರಣೀಯವಾದವುಗಳಾಗಿವೆ.

ಆದರೆ ಸ್ತ್ರೀ ವಿಷಯದಲ್ಲಿ ಇಂತಹ ಅತ್ಯುತ್ತಮ ನಿದರ್ಶನಗಳಿದ್ದಾಗಲೂ ಸಹ ತಿರಸ್ಕಾರ, ಅಪಮಾನ, ಅತ್ಯಾಚಾರ, ಸ್ವೇಚ್ಛಾಚಾರ, ಶೋಷಣೆ, ಕೌಟುಂಬಿಕ ಹಿಂಸೆ, ಲಿಂಗ ತಾರತಮ್ಯ, ಭ್ರೂಣಹತ್ಯೆಯಂತಹ ಕುನೀತಿಗಳಿಂದ ಸಮಾಜ ಜರ್ಜರಿತವಾಗಿದೆ. ಇಂತಹ ಸಮಸ್ಯೆಗಳಿಂದ ಅನೇಕ ಸಾಮಾಜಿಕ ಸಮಸ್ಯೆಗಳು ಸಹ ಹುಟ್ಟಿಕೊಂಡಿವೆ. ಇವುಗಳಿಂದ ಸಮಾಜವನ್ನು ವಿಮುಕ್ತಿಗೊಳಿಸುವ ಜವಾಬ್ದಾರಿ ಪೂರ್ಣ ಸಮಾಜದ ಮೇಲಿದೆ, ಅದರಲ್ಲೂ ಬೌದ್ಧಿಕ ವರ್ಗವಾದ ಶಿಕ್ಷಕರ ಪಾತ್ರ ಪ್ರಮುಖವಾಗಿದೆ.

ಆದ್ದರಿಂದ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ನಿಮ್ಮೆಲ್ಲರ ಸಮಕ್ಷಮದಲ್ಲಿ ನಾವೆಲ್ಲರೂ ಮಾತೃಶಕ್ತಿಯನ್ನು ಗೌರವಿಸಲು ವಿದ್ಯುಕ್ತರಾಗಬೇಕೆಂಬ ಪ್ರಸ್ತಾವನೆಯನ್ನು ಇಡುತ್ತಿದೆ. ಪುರುಷರಿಗೆ ಸಮಾನರಷ್ಟೇ ಅಲ್ಲದೇ ಸ್ತ್ರೀಶಕ್ತಿಗೆ ಇನ್ನೂ ವಿಶೇಷ ಸ್ಥಾನಮಾನದ ಅವಶ್ಯಕತೆಯಿದೆ. ಮಾತೃಶಕ್ತಿಯ ವಿವಿಧ ರೂಪಗಳಾದ (ತಾಯಿ, ಸಹೋದರಿ, ಸಹಧರ್ಮಿಣಿ, ಸಹಕರ್ಮಿಣಿ, ಗೆಳತಿ ಮುಂತಾದವು) ಹಿರಿಮೆಯ ರಕ್ಷಣೆಯಾಗಬೇಕು.

ನಮ್ಮಲ್ಲಿರುವ ಮಾತೃಸಮಾಜದ ಬಗೆಗಿನ ಗೌರವ ನಮ್ಮ ದೈನಂದಿನ ನಡತೆಯಲ್ಲಿ ಕಾಣುವಂತಿರಬೇಕು. ಸ್ತ್ರೀಯು ಸಹ ಉತ್ತಮ ನಡತೆಯೊಂದಿಗೆ ಪೂರ್ಣತೆಯ ಕಡೆ ಸಾಗಬೇಕು ಮತ್ತು ಪುರುಷರು ಸಹ ತಮ್ಮ ದೃಷ್ಟಿಕೋನವನ್ನು ಬದಲಾಯಿಸಿಕೊಳ್ಳಬೇಕು. ಭಾರತವು ವಿಶ್ವಗುರುವಾಗುವಲ್ಲಿ ಮಾತೃಶಕ್ತಿಯ ಉನ್ನತಿಯು ಸಾಧನೆಯಾಗಬೇಕೆಂಬುದೇ ಈ ಪ್ರಸ್ತಾವನೆಯ ಗುರಿಯಾಗಿದೆ.

### ನಿರ್ಣಯ–3

## ರಾಜ್ಯದ ಪ್ರಸ್ತುತ ಶೈಕ್ಷಣಿಕ ಸ್ಥಿತಿ

- ಶಿಕ್ಷಕರಿಗೆ ಹಳೆಯ ಪಿಂಚಣಿ ವ್ಯವಸ್ಥೆ ಜಾರಿಗೆ ತರುವುದು.
- ವೈಜ್ಞಾನಿಕ ವರ್ಗಾವಣೆ ನೀತಿಯನ್ನು ನಿರೂಪಿಸುವುದು.
- ಅನುದಾನಿತ ಶಿಕ್ಷಕರಿಗೆ ಕಾಲ್ಪನಿಕ ವೇತನ ಜಾರಿಗೆ ತರುವುದು.
- ಅನುದಾನಿತ/ ಸರಕಾರಿ ಶಾಲೆಗಳಲ್ಲಿ ಆರ್.ಟಿ.ಇ ಕಾಯ್ದೆಯಲ್ಲಿಯ ಶಿಕ್ಷಕ: ವಿದ್ಯಾರ್ಥಿಗಳ ಅನುಪಾತದಂತೆ ಹೆಚ್ಚುವರಿ ಶಿಕ್ಷಕರನ್ನು ಪರಿಗಣಿಸುವುದು.
- ಜೆ.ಒ.ಸಿ. ಶಿಕ್ಷಕರಿಗೆ ಖಾಯಂ ಪೂರ್ವ ಸೇವಾ ಅವಧಿಯನ್ನು ಪಿಂಚಣಿ ಮತ್ತು ಇತರೆ ಸೌಲಭ್ಯಗಳಿಗೆ ಪರಿಗಣಿಸುವುದು.
- ಬಡ್ತಿ ಶಿಕ್ಷಕರಿಗೆ ಕಾಲಮಿತಿ ವೇತನ ಬಡ್ತಿ ನೀಡುವುದು.
- 2008 ನಂತರ ನೇರ ನೇಮಕ ಹೊಂದಿರುವ ಶಿಕ್ಷಕರಿಗೆ ಒಂದು ವಿಶೇಷ ಬಡ್ತಿ ನೀಡುವುದು.
- ದೈಹಿಕ ಶಿಕ್ಷಣ ಶಿಕ್ಷಕರಿಗಾಗಿ ವೈದ್ಯನಾಥನ್ ವರದಿ ಯಥಾವತ್ತಾಗಿ ಜಾರಿಗೊಳಿಸುವುದು.
- ವಸತಿ ಶಾಲೆಗಗಳಲ್ಲಿ ಕಾರ್ಯ ಮಾಡುವ ಶಿಕ್ಷಕರಿಗೆ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಶಿಕ್ಷಕರಿಗೆ ನೀಡುವ ಎಲ್ಲಾ ಸೌಲಭ್ಯಗಳನ್ನು ಒದಗಿಸುವುದು.
- ಅನುದಾನ ರಹಿತ ಶಿಕ್ಷಕರಿಗೆ ಕನಿಷ್ಠ ಮೂಲ ವೇತನ ನಿಗದಿಪಡಿಸುವುದು.
- ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿಯ ಅಧ್ಯಾಪಕರ ವೇತನ ತಾರತಮ್ಯ ಸರಿಪಡಿಸುವುದು.
- ಕೆ.ಪಿ.ಎಸ್. ಶಾಲೆಗಳ ಸಂರಚನೆಯಲ್ಲಿಯ ಗೊಂದಲ ನಿವಾರಿಸುವುದು.
- ಪಠ್ಯ ಪುಸ್ತಕದ ಹೊರೆಯನ್ನು ವೈಜ್ಞಾನಿಕವಾಗಿ ಕಡಿತಗೊಳಿಸುವುದು.
- ಡಿ.ಎಲ್.ಡಿ ಶಿಕ್ಷಣ ಸಂಸ್ಥೆಯಲ್ಲಿ ಕಾರ್ಯ ಮಾಡುವ ಶಿಕ್ಷಕರಿಗೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಶಿಕ್ಷಕರಿಗೆ ನೀಡುವ ಎಲ್ಲಾ ಸೌಲಭ್ಯಗಳನ್ನು ಒದಗಿಸುವುದು.
- ಪದವಿ ಪೂರ್ವ ವಾಣಿಜ್ಯ ಉಪನ್ಯಾಸಕರಿಗೆ ವಿಷಯವಾರು ಪ್ರತ್ಯೇಕ ಉಪನ್ಯಾಸಕರ ನೇಮಕ.
- ಅನುದಾನಿತ/ಸರಕಾರಿ ಶಾಲೆಗಳಲ್ಲಿ ಇರುವ ಖಾಲಿ ಹುದ್ದೆಗಳನ್ನು ತುಂಬುವುದು.
- ಹಿಂದಿ ಮತ್ತು ಸಂಸ್ಕೃತ ಶಿಕ್ಷಣಕ್ಕೆ ವಿಷಯ ಪರಿವೀಕ್ಷರನ್ನು ನೇಮಿಸಿ ಆ ವಿಷಯಗಳ ಸಬಲೀಕರಣ ಮಾಡುವುದು.
- ಚಿತ್ರಕಲಾ ವೃತ್ತಿ, ಸಂಗೀತ, ನೃತ್ಯ, ಹೊಲಿಗೆ ಈ ವಿಶೇಷ ಶಿಕ್ಷಕರ ಹುದ್ದೆಗಳನ್ನು ತುಂಬುವುದು ಮತ್ತು ಈ ವಿಷಯಗಳಿಗೆ ಒತ್ತು ನೀಡುವುದು.
- ಅನುದಾನಿತ ಶಿಕ್ಷಕರಿಗೆ ಸರಕಾರಿ ಶಿಕ್ಷಕರಿಗೆ ಇರುವಂತೆ ಸಮಾನ ಸೌಲಭ್ಯಗಳನ್ನು ನೀಡುವುದು.
- ಹುಬ್ಬಳ್ಳಿ–ಧಾರವಾಡ ಮಹಾನಗರದಲ್ಲಿ ಶಿಕ್ಷಕರ ಸದನದ ನಿರ್ಮಾಣ.

ಈ ಎಲ್ಲ ವಿಷಯಗಳನ್ನು ಸರಕಾರ ಗಮನಹರಿಸಿ ಪರಿಹರಿಸಲು ಈ ಶೈಕ್ಷಣಿಕ ಸಮ್ಮೇಳನವು ಒತ್ತಾಯಿಸುತ್ತದೆ.

●

- **ಒಮ್ಮೆ ಅವನ ಪವಿತ್ರನಾಮದ ಶಕ್ತಿಯಲ್ಲಿ ನಂಬಿಕೆ ಹುಟ್ಟಿ ಅದನ್ನು ಪದೇ ಪದೇ ಉಚ್ಚರಿಸುವುದಕ್ಕೆ ಮನಸ್ಸಾದ ಮೇಲೆ ಭಕ್ತಿ, ವಿವೇಕ, ಸಾಧನೆಗಳಾವುವೂ ಅವಶ್ಯಕವಿಲ್ಲ. ಸಂಶಯ ಮಾಯವಾಗುವುದು. ಅವನ ನಾಮದ ಬಲದಿಂದ ದೇವರನ್ನೇ ಹೊಂದುವನು.**
- ಶ್ರೀರಾಮಕೃಷ್ಣರ ನೇರ ಶಿಷ್ಯರಾದ ಸ್ವಾಮಿ ಬ್ರಹ್ಮಾನಂದರು ಹೇಳುತ್ತಾರೆ. 'ನೋಡು, ನೀನು ಭಜನೆ ಮತ್ತು ಸಂಗೀತವನ್ನು ಪ್ರೀತಿಸಬೇಕು. ಸಂಗೀತದ ಮೂಲಕವೂ ಭಗವಂತನನ್ನು ಸೇರಬಹುದು ಎಂಬುದನ್ನು ನೀನು ಎಂದೆಂದಿಗೂ ಮನಸ್ಸಿನಲ್ಲಿಟ್ಟುಕೋ. ಸಂಗೀತವು 'ಶಬ್ದಬ್ರಹ್ಮ'ವೇ ಆಗಿದೆ. ಒಬ್ಬ ವ್ಯಕ್ತಿ ಧ್ಯಾನದ ಮೂಲಕ ಇದನ್ನು ಅನುಭವಿಸುತ್ತಾನೆ. – ಶ್ರೀರಾಮಕೃಷ್ಣರು

# ಅರಬ್ಬೀ ಸಾಹಿತ್ಯದಲ್ಲಿ ವೇದಗಳ ಪ್ರಶಂಸೆ

ಕೃಪೆ : ಶಿಕ್ಷಾ ಉತ್ಥಾನ–ದ್ವೈಮಾಸಿಕ ಪತ್ರಿಕೆ

ಭಾಷಾಂತರ : ಹೆಚ್.ಎನ್.ಆರ್.

'ಯರುಶಲೋಂ' ನಗರದಲ್ಲಿನ ಅತ್ಯಂತ ಪ್ರತಿಷ್ಠಿತ ಲೈಬ್ರರಿಯಲ್ಲಿ ಒಂಟೆಯ ಚರ್ಮದಲ್ಲಿ ಮಾಡಿದ ಚಿತ್ರ ಪುಸ್ತಕವನ್ನು ಕಂಡು, ಅದರಲ್ಲಿ ಬರೆದಿಟ್ಟಿದ್ದ ಪದ್ಯಗಳ ಸಾಲನ್ನು ಓದಿದಾಗ ನಾನು ಆಶ್ಚರ್ಯಚಕಿತನಾದೆ. ಕ್ರಿ.ಸ್ತಪೂರ್ವ 2300ರಿಂದ 2400ಕ್ಕೂ ಹಿಂದೆ ಅಂದರೆ ಪ್ರವಾದಿ ಮಹಮದ್‌ರ ಜನ್ಮಕ್ಕೂ ಎಷ್ಟೋ ಶತಮಾನಗಳ ಮುನ್ನ ಅರೇಬಿಯನ್ ಮಹಾರಾಜ 'ಅಮಿನ್ ಅಲ್ ಮೋಮನಿನ್' ನ ಆಸ್ಥಾನದಲ್ಲಿ ಮಸ್‌ಲಾಂ ಎಂಬ ಕವಿಯು ಈ ಪದ್ಯಗಳನ್ನು ವಾಚಿಸಿದನು. ಈ ಸಮಯದಲ್ಲಿ ಮಸ್‌ಲಾಂಗೆ ರಾಷ್ಟ್ರೀಯ ಅರೇಬಿಯನ್ ಕವಿ ಎಂಬ ಬಿರುದನ್ನು ಮಹಾರಾಜರು ನೀಡಿದರು. ಈತನ ಪದ್ಯಗಳನ್ನು ಹದಮಾಡಿದ ಒಂಟೆಯ ಚರ್ಮದ ಮೇಲೆ ಬರೆದು ಕಟ್ಟು ಹಾಕಿಸಿ ಅದನ್ನು ರಾಜನ ಆಸ್ಥಾನದ ಗೋಡೆಗಳ ಮೇಲೆ ತೂಗು ಹಾಕಲಾಗಿತ್ತು.

ಈ ಎಲ್ಲ ಸಂಗತಿಯನ್ನು 800 ವರ್ಷಗಳ ಹಿಂದೆ (ಕ್ರಿ.ಶ 1200) ಖಲೀಫನಾಗಿದ್ದ ಹಾರುರಶೀದ್‌ನ ಕಾಲದಲ್ಲಿ ಅಸ್‌ಮೈ ಎಂಬ ಲೇಖಕನಿಂದ ಸಂಪಾದಿಸಲ್ಪಟ್ಟ ಸೈರುಲ್‌ಕುಲ್ ಎಂಬ ಗ್ರಂಥದಲ್ಲಿ ಉಲ್ಲೇಖಿಸಲಾಗಿದೆ. ನಾನು ಪ್ರಾರಂಭದಲ್ಲಿ ಆಶ್ಚರ್ಯಚಕಿತನಾದೆ ಎಂದು ಹೇಳಿದ್ದು ಈ ಸೈರುಲ್‌ಕುಲ್ ಗ್ರಂಥವನ್ನು ಕುರಿತಾಗಿಯೇ. ಅಸ್‌ಮೈ ಈ ಸಂಪಾದಿತ ಗ್ರಂಥದಲ್ಲಿ "ಲಬಿಬಿನ್ ಅಕ್‌ಹತಬ್‌ಬಿನ್ ಕುರ್‌ಫಾ ಅತ್ಯಂತ ಶ್ರೇಷ್ಠನಾದ ಅರೇಬಿಕ್ ಕವಿಯಾಗಿದ್ದ ಮತ್ತು ಚರ್ಮ ಲೇಖನದ ಪಿತಾಮಹನೂ ಹೌದು ಎಂಬುದಾಗಿ" ಬರೆಯುತ್ತಾನೆ. ಈತನ ಕಾಲ ಮೂರು ಸಾವಿರದ ಏಳುನೂರ ಐವತ್ತು ವರ್ಷಗಳ ಹಿಂದೆ. ಕಾರಣ ಈತ ಹುಟ್ಟಿದ್ದು ಪ್ರವಾದಿ ಪೈಗಂಬರ್ ಮಹಮದ್‌ರಿಗಿಂತ 2400 ವರ್ಷಗಳ ಹಿಂದೆ ನಮೂದಿಸಿದ್ದಾನೆ. ಇದೀಗ ಪ್ರವಾದಿ ಪೈಗಂಬರ್ ಮಹಮದ್‌ರ ಕಾಲ ಕಳೆದು 1300 ವರ್ಷಗಳಾಗಿವೆ. ಅಂದು ಲಬಿಬಿನ್ ಬರೆದ ಪದ್ಯಗಳು ಈ ಕೆಳಗಿನಂತಿವೆ.

1.. **Aya mu maarak-ala –arje yushannihaa min- a-hind,**
**Wa aradikallaah yannajijay jjidratun.**

**ಅರ್ಥ:** ಹೇ ಹಿಂದ್‌ನ ಭೂಮಿ ನೀನು ನೈಜವಾಗಿ ಹೊಗಳಿಕೆಗೆ ಅರ್ಹಳಾಗಿರುವೆ. ಏಕೆಂದರೆ ಅಲ್ಲಾಹುವಿನ ದಿವ್ಯ ಜ್ಞಾನವು ನಿನ್ನಲ್ಲಿ ಮೈತಳೆದು ಬಂದಿದೆ.

2. **Wahala bahalayuun ainak subahi Arab ata jjikuru,**
**Haajjihill yunjjfi are rasuulu min-aal-hindtun.**

**ಅರ್ಥ:** ಆ ಯಾವ ನಾಲ್ಕು ಧರ್ಮಗ್ರಂಥಗಳ ದಿವ್ಯಜ್ಞಾನವು ಅರುಣೋದಯದ ಸೂರ್ಯನಂತೆ ಸುಂದರವಾಗಿದೆಯೋ ಅದನ್ನು ಈ ಹಿಂದುಭೂಮಿ ಭಾರತದಲ್ಲಿ ಪರಮಾತ್ಮನು ಇಲ್ಲಿನ ರಸೂಲ್‌ರ ಅಂದರೆ ಪರಿಶುದ್ಧ ಜನರ ಹೃದಯಾಳದಲ್ಲಿ ಪ್ರಕಾಶಗೊಳಿಸಿದ್ದಾನೆ.

3. **Yakuuluun-Allahaa yaa ahala – ala- arje aalmin kullum,**
**Fattabaauu jikratul veeda hakkana maala yujjiletun.**

**ಅರ್ಥ:** ಜಗತ್ತಿನ ಎಲ್ಲ ಜನರೂ ವೇದಗಳನ್ನು ಅನುಸರಿಸಬೇಕೆಂದು ಅಲ್ಲಾಹುವು ಆಜ್ಞಾಪಿಸಿದರು; ಇದನ್ನು ನಾನು ಪ್ರಕಟಿಸುತ್ತಿರುವೆ ಎಂಬುದರಲ್ಲಿ ಕಿಂಚಿತ್ತೂ ಸಂಶಯಪಡುವುದು ಬೇಡ.

4. **Wa huwaa aalmusaam wal yujur minllkhi tanjjeelan,**
**Ffa- enanaa yaa akhiyu tabian yayahishabaree nanjaatun.**

**ಅರ್ಥ:** ಜ್ಞಾನ ಭಂಡಾರವಾದ 'ಸಾಮ' ಮತು 'ಯಜುರ್'ಗಳನ್ನು ಅಲ್ಲಾಹುವೇ ಪ್ರಕಟಿಸಿದನು. ಎಲ್ಲ ಸೋದರರೇ ಅದನ್ನು ಅನುಸರಿಸಿ. ಅದೇ ಪ್ರತಿಯೊಬ್ಬರನ್ನೂ ಇಹ ಬಂಧನದಿಂದ ಮುಕ್ತಿಗೊಳಿಸಿ ಬಹಾರತ್ ಅಥವಾ ಮೋಕ್ಷವನ್ನು ಗಳಿಸಿಕೊಡುತ್ತದೆ.

5. **Wa esnainaa humaa rik athar naasihinaa ukhwatun,**
**Wa asnaata alaa uudanwa wa huwaa masha-artun.**

**ಅರ್ಥ:** 'ಋಕ್' ಮತ್ತು 'ಸಾಮ' ವೆಂಬ ಮತ್ತೆರಡು ನಮಗೆ ಭ್ರಾತೃತ್ವ ಜ್ಞಾನವನ್ನು ನೀಡುತ್ತವೆ. ಅವು ಎಲ್ಲ ವ್ಯಾವಹಾರಿಕ ಕೃತ್ಯಗಳ ಮೂಲ ಮತ್ತು ಆ ವ್ಯವಹಾರಿಕ ಆದೇಶಗಳನ್ನು ಪಾಲಿಸಲು ಕಲಿಸುತ್ತದೆ. •

ಭೂರಮೆ

# ಕಲಿಕೆಯ ದಾರಿಗಳು

ನಂ. ನಾಗಲಕ್ಷ್ಮಿ
ನಿವೃತ್ತ ಕನ್ನಡ ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು, ಬೆಂಗಳೂರು

**ಕೆಲವಂ ಬಲ್ಲವರಿಂದ ಕಲ್ತು ಕೆಲವಂ ಶಾಸ್ತ್ರಗಳಿಂ ಕೇಳುತಂ**
**ಕೆಲವಂ ಮಾಳ್ಪವರಿಂದ ಕಲ್ತು ಕೆಲವಂ ಸಜ್ಜನ ಸಂಗದಿಂದಲರಿಯಲ್**
**ಕೆಲವಂ ಸುಜ್ಞಾನದಿಂದ ನೋಡುತಂ ಸರ್ವಜ್ಞನಪ್ಪಂ ನರಂ**
**ಪಲವುಂ ಪಳ್ಳ ಸಮುದ್ರವೈ ಹರಹರಾ ಶ್ರೀ ಚೆನ್ನಸೋಮೇಶ್ವರಾ॥**

ಹೀಗೆ 'ಕಲಿಕೆ' ಎನ್ನುವುದು ಒಂದು ರೀತಿಯಿಂದಲ್ಲ, ಒಬ್ಬರಿಂದಲೇ ಅಲ್ಲ, ನಾನಾ ದಾರಿಗಳಿಂದ, ನಾನಾ ರೂಪಗಳಿಂದ ನಡೆಯಬೇಕೆನ್ನುತ್ತಾನೆ ಕನ್ನಡದ ಕವಿ ಪಾಲ್ಕುರಿಕೆ ಸೋಮನಾಥ. ಅಂದರೆ, 'ಜ್ಞಾನಾರ್ಜನೆ' ಎಂಬುದು ಯಾರಿಂದ ಯಾವಾಗ ಯಾವ ರೀತಿಯಲ್ಲಿ ನಡೆಯಬಹುದೆಂಬುದನ್ನು ನಿರ್ದಿಷ್ಟಪಡಿಸುವುದು ಸಾಧ್ಯವಿಲ್ಲ. ಅದಕ್ಕೇ ನಮ್ಮಲ್ಲಿ ಸ್ಪಂದಿಸುವ ಗುಣ ಯಾವಾಗಲೂ ಕ್ರಿಯಾಶೀಲ ವಾಗಿರಬೇಕಾದುದು ಅಗತ್ಯವೆಂಬ ಭಾವ. ಶಿಕ್ಷಣವೆಂಬುದು ಜೀವನದ ಅರ್ಥ, ಗುರಿ ಮತ್ತು ಅದರ ಸಾಧನೆಯ ಉಪಾಯಗಳನ್ನು ಕಲಿಸುವುದೇ ಆಗಿರುವುದರಿಂದ ಅಂತಹ ಅವಕಾಶಗಳು ಯಾವುದನ್ನೂ ಕೂಡ ಅಲಕ್ಷಿಸಬಾರದೆಂದು ಜ್ಞಾನಿಗಳು ಹೇಳುತ್ತಾರೆ. ಇದಕ್ಕೆ ಪೂರಕವಾದ ಮತ್ತೊಂದು ನುಡಿಮುತ್ತು ಇಲ್ಲಿ ಸ್ಮರಿಸಬಹುದು. "ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ", ನಮ್ಮ ಜ್ಞಾನೇಂದ್ರಿಯಗಳನ್ನು ಸದಾಕಾಲಕ್ಕೂ ಜಾಗೃತವಾಗಿಟ್ಟುಕೊಂಡಾಗ ಮಾತ್ರ ಹೀಗೆ ಫಲಾನುಭವಿಗಳಾಗುವುದು ಸಾಧ್ಯವೆನ್ನುತ್ತಾರೆ. ಪ್ರತಿಯೊಬ್ಬರೂ ಅಗತ್ಯವಾಗಿ ರೂಢಿಸಿಕೊಳ್ಳಬೇಕಾದ ಗುಣಗಳಾದ ಆತ್ಮವಿಶ್ವಾಸ, ಜವಾಬ್ದಾರಿಯ ಅರಿವು, ಸಮಾಜದೊಡನೆ ಸೌಜನ್ಯಯುತ ನಡವಳಿಕೆ, ಪ್ರಕೃತಿಯೊಡನೆ ಸ್ಪಂದನೆ ಎಲ್ಲವನ್ನೂ ನಮ್ಮ ಸುತ್ತಲಿನ ಜನರ ಸಂಪರ್ಕದ ಮೂಲಕ ಅವಕಾಶಗಳಿರುವುದರಿಂದ ಹಾಗೆ ಬೆರೆಯುವ ಬಳಗದ ಆಯ್ಕೆಯನ್ನು ಎಚ್ಚರಿಕೆಯಿಂದ ಮಾಡಬೇಕಾಗುತ್ತದೆ.

'ಅನುಭವಕ್ಕಿಂತ ದೊಡ್ಡ ಪಾಠವಿಲ್ಲ' ಎಂಬ ಮಾತಿದೆ. ಅದರಿಂದ, ನಾವು ಜೀವನದಲ್ಲಿ ಪಡೆದುಕೊಳ್ಳುವ ನಾನಾ ಬಗೆಯ ಅನುಭವಗಳೇ ನಮ್ಮ ಜೀವನವನ್ನು ರೂಪಿಸಿಕೊಳ್ಳುವಲ್ಲಿ, ಮಾಡಿರುವ, ಮಾಡಬಹುದಾದ ತಪ್ಪುಗಳ ಬಗ್ಗೆ ಜಾಗೃತಿ ಹೊಂದಿ ಸರಿಪಡಿಸಿಕೊಳ್ಳುವಲ್ಲಿ ನೆರವಾಗುತ್ತವೆ ಎಂಬುದು ಸತ್ಯವಾದ ಮಾತು. ಇವುಗಳಲ್ಲಿ ಕೆಲವು ತೀರ ಸಣ್ಣದಾಗಿರಬಹುದು. ನಗಣ್ಯವೆಂದು ನಾವು ಅವುಗಳನ್ನು ಗಂಭೀರವಾಗಿ ಪರಿಗಣಿಸದಿರಬಹುದು. ಆದರೆ ಸೂಕ್ಷ್ಮವಾಗಿ ಅಂತಹ ಸನ್ನಿವೇಶಗಳನ್ನು ಮತ್ತೆ ಮತ್ತೆ ಮಂಥಿಸಿ ಚಿಂತಿಸಿದಾಗ ಅಲ್ಲಿ ಅಡಗಿರುವ ತಿರುಳಿನ ಮಹತ್ತ್ವವೇನೆಂಬುದು ಅರಿವಾಗುತ್ತದೆ. ಇದಕ್ಕೆ ನಿದರ್ಶನವಾಗಿ ಕೆಲವು ಸ್ವಾನುಭವಗಳನ್ನು ಉದಾಹರಿಸಬಹುದೆನಿಸುತ್ತದೆ.

ಜ್ಞಾನಪೀಠ ಪುರಸ್ಕೃತ ಮಾಸ್ತಿವೆಂಕಟೇಶ ಅಯ್ಯಂಗಾರ್ ಅವರನ್ನು ಭೇಟಿ ಮಾಡಿ ಸಮಾರಂಭವೊಂದಕ್ಕೆ ಆಹ್ವಾನಿಸಿ ಆಶೀರ್ವಾದ ಪಡೆದು ಬರಲು ನಾನು, ನನ್ನ ಗೆಳತಿ ಅವರ ಮನೆಗೆ ಹೋಗಿದ್ದೆವು. ಕನ್ನಡದಲ್ಲಿ ಪ್ರಾರಂಭಿಸುತ್ತಿದ್ದ ಪತ್ರಿಕೆಯೊಂದಕ್ಕೆ ನಾವಿಬ್ಬರೂ ಸಹಸಂಪಾದಕಿಯ ರಾಗಿದ್ದೆವು. ಅಷ್ಟು ದೊಡ್ಡ ಸಾಹಿತಿಗಳು, ಹಿರಿಯರು ನಮ್ಮನ್ನು ಯಾವ ರೀತಿಯಲ್ಲಿ ಮಾತನಾಡಿಸುತ್ತಾರೋ ಎಂಬ ಅಳುಕು ನಮ್ಮಲ್ಲಿತ್ತು. ಅವರ ಮನೆಯಲ್ಲಿ ಕನ್ನಡ ಸಾಹಿತ್ಯದ ಮತ್ತೊಬ್ಬ ದಿಗ್ಗಜ ಡಾ॥ ಹಾ.ಮಾ ನಾಯಕರೂ ಆಗ ಅಲ್ಲಿದ್ದರು. ಮಾಸ್ತಿಯವರಿಗೆ ನಮಸ್ಕರಿಸಿ ನಮ್ಮ



ಆಹ್ವಾನ ಸಲ್ಲಿಸಿದಾಗ 'ಸಂಪಾದಕರು ಯಾರು? ಎಂದು ಕೇಳಿದ್ದರು. 'ಭಾಸ್ಕರ್' ಎಂಬವರ ಹೆಸರು ಹೇಳಿ ನಾವು ಉಪಸಂಪಾದಕಿಯರು ಎಂದಾಗ "ಕನ್ನಡದ ಸೇವೆ ಮಾಡಲು ಹೊರಟ್ಟಿದ್ದೀರಿ ತುಂಬ ಸಂತೋಷ. ಒಳ್ಳೆಯದಾಗಲಿ, ಆದರೆ ನೀವು ಮಹಿಳೆಯರೂ ಸಂಪಾದಕಿಯರಾಗಿ ಪತ್ರಿಕೆ ನಡೆಸುವಂತಾಗಬೇಕು, ಆಗುತ್ತದೆ ಆ ಸಾಮರ್ಥ್ಯ ನಿಮ್ಮಲ್ಲಿಯೂ ಇದೆ, ಹೋಗಿಬನ್ನಿ" ಎಂದು ಬೆನ್ನುತಟ್ಟಿ ಕಳುಹಿಸಿದ್ದರು. ಹಿರಿತನದ ಹಮ್ಮು-ಬಿಮ್ಮುಗಳಿಲ್ಲದೆ ಕಿರಿಯರನ್ನು ಪ್ರೋತ್ಸಾಹಿಸಿ, ಅವರಲ್ಲಿ ಆತ್ಮವಿಶ್ವಾಸವನ್ನು ತುಂಬಿದ ಆ ಹಿರಿಯರ ಹೃದಯವಂತಿಕೆಯ ನಡೆ-ನುಡಿ ನಮ್ಮಲ್ಲಿ ಅವರ ಬಗ್ಗೆ ಇದ್ದ ಗೌರವವನ್ನು ನೂರ್ಮಡಿಸಿದ್ದಲ್ಲದೆ ನಾವೂ ಕೂಡ ನಮ್ಮ ಕಿರಿಯರೊಂದಿಗೆ ನಡೆದುಕೊಳ್ಳಬೇಕಾದ ರೀತಿಯನ್ನು ಕಲಿಸಿತ್ತು. ಅದರ ಪರಿಣಾಮ ಎಷ್ಟು ಗಾಢವಾಗಿತ್ತೆಂದರೆ ನನ್ನ ಹಲವು ಶಿಷ್ಯರಿಗೆ ಮಾರ್ಗದರ್ಶನ ಮಾಡುವಾಗ ಈ ಅನುಭವವನ್ನು ಮತ್ತೆ ಮತ್ತೆ ಸ್ಮರಿಸುವಂತಾಗಿತ್ತು, ಎಂದೂ ಮರೆಯದ ಪಾಠ ಅವರಿಂದ ನಾನು ಕಲಿತಿದ್ದೆ.

ಕನ್ನಡದ ನಿಘಂಟುಬ್ರಹ್ಮ, ಶಬ್ದಸಾಗರ ಎಂಬ ಹಲವು ನಾಮಗಳಿಂದ ಖ್ಯಾತರಾಗಿರುವ ಶತಾಯುಷಿ ಪ್ರೊ. ಜಿ. ವೆಂಕಟಸುಬ್ಬಯ್ಯನವರು ಅವರ ಮನೆಗೆ ಹೋಗುವ ಯಾರೇ ಅತಿಥಿಗಳನ್ನು ಹಿರಿಯ-ಕಿರಿಯರೆಂಬ ಭೇದವಿಲ್ಲದೆ ನಡೆಸಿಕೊಳ್ಳುವ ರೀತಿ ಅತ್ಯಂತ ಅನುಕರಣೀಯವಾದುದು. ಆತ್ಮೀಯತೆಯ ಸೌಜನ್ಯದೊಂದಿಗೆ ಮಾತನಾಡಿ ನಂತರ ತಲೆಬಾಗಿಲಲ್ಲಿ ಬಂದು ನಿಂತು ಬೀಳ್ಕೊಡುವ ರೀತಿಯನ್ನು ಯಾರೂ ಎಂದೂ ಮರೆಯಲಾಗದು. ಆ ಸುಸಂಸ್ಕೃತ ನಡವಳಿಕೆಯ ಪಾಠ ನಮಗೆ ಯಾವುದೇ ಪಠ್ಯಪುಸ್ತಕದಲ್ಲಿ ದೊರೆಯುವುದಕ್ಕಿಂತ ಮೇಲಾದುದು. ಇದು ನಾನು ಪ್ರತಿಬಾರಿ ಅವರ ಮನೆಗೆ ಹೋದಾಗ ಪಡೆದ ಅನುಭವ.

ಹಿರಿಯ ಶಿಕ್ಷಣತಜ್ಞ ಡಾ॥ ಎಚ್.ನರಸಿಂಹಯ್ಯನವರನ್ನು ಸಂದರ್ಶಿಸುವ ಸಂದರ್ಭ ಒದಗಿತ್ತು. ನ್ಯಾಷನಲ್ ಕಾಲೇಜಿನಲ್ಲಿ ಅವರ ಪ್ರಾಂಶುಪಾಲರ ಕೋಣೆಯಲ್ಲಿ ಭೇಟಿಯಾಗಿ ಕಡೆಗೆ ಎದ್ದು ಹೊರಟಾಗ ನಾನು ಕುಳಿತಿದ್ದ ಕುರ್ಚಿಯನ್ನು ಹಿಂದಕ್ಕೆಳೆದು ಮತ್ತೆ ಸ್ವಸ್ಥಾನಕ್ಕೆ ತಳ್ಳಿದಾಗ ತಲೆ ತಗ್ಗಿಸಿ ಯಾವುದೋ ಫೈಲ್ ನೋಡುತ್ತಿದ್ದವರು ಗಮನಿಸಿ ತಕ್ಷಣ ತಲೆಯೆತ್ತಿ "ಇದೇನಮ್ಮ ನಾವು ನಮ್ಮ ಗುರುಗಳಾದ ಶ್ರೀನಿವಾಸರಾವ್‌ರಿಂದ ಕಲಿತದ್ದು, ಕ್ರಿಯೆ ಸಣ್ಣದಿರಬಹುದು. ಆದರೆ ಇದನ್ನು ಮಾಡದೆ ಕುರ್ಚಿಯನ್ನು ಹಾಗೇ ಬಿಟ್ಟು ಹೊರಟರೆ ಅದು ನಮ್ಮಲ್ಲಿನ ಉಡಾಫೆಯ

ಪುಟ 9 ಕ್ಕೆ ➢

# 'ಭಾರತಮಾತಾ ಅಸೋಸಿಯೇಷನ್'ಎಂಬ ಆ ಸಂಘಟನೆ!


ಭೀಮಸೇನ್ ಪುರೋಹಿತ್
ಡಾಟಾ ಸೈಂಟಿಸ್ಟ್
ಬೆಂಗಳೂರು



ಅವತ್ತು ಜೂನ್ 17, 1911. ತಮಿಳುನಾಡಿನ ತೂತುಕುಡಿಯ (ಟುಟಿಕಾರಿನ್) ಸಬ್-ಕಲೆಕ್ಟರ್ ಆಗಿದ್ದ ರಾಬರ್ಟ್ ಆಶ್‌ನ ಹಣೆಬರಹ ಅಂದು ನೆಟ್ಟಗಿರಲಿಲ್ಲ ಅನ್ಸುತ್ತೆ. ಅವನು ರೈಲಿನಲ್ಲಿ ಸಂಚರಿಸುತ್ತಿದ್ದ. ರೈಲ್ ಗಾಡಿ 'ಮನಿಯಚಿ' ನಿಲ್ದಾಣದಲ್ಲಿ ನಿಂತಿತ್ತು. ಆಶ್ ಮೊದಲನೇ ದರ್ಜೆಯ ಬೋಗಿಯಲ್ಲಿ ಕುಳಿತಿದ್ದ. ಆತ ಹಾಗೆ ತನ್ನದೇ ಲಹರಿಯಲ್ಲಿ ವಿಚಾರಮಗ್ನನಾಗಿದ್ದ. ನೋಡುನೋಡುತ್ತಲೇ 25 ರ ಹರೆಯದ ತರುಣನೊಬ್ಬ ಧಿಡೀರನೆ ಬೋಗಿಯೊಳಗೆ ನುಗ್ಗಿದ. ಏನಾಗುತ್ತಿದೆ ಎಂದು ಕಣ್ತೆರೆಯುವಷ್ಟರಲ್ಲಿ, ಆ ಯುವಕ ತನ್ನ ಸೊಂಟದಲ್ಲಿ ಸಿಕ್ಕಿಸಿಕೊಂಡಿದ್ದ ಪಿಸ್ತೂಲನ್ನು ತೆಗೆದು, ಆಶ್‌ಗೆ ಗುರಿಯಿಟ್ಟು ಗುಂಡು ಹೊಡೆದ. ಪಾಯಿಂಟ್-ಬ್ಲಾಂಕ್ ರೇಂಜ್‌ನಲ್ಲಿ ಬಂದ ಗುಂಡು ಆಶ್ ನ ಪ್ರಾಣವನ್ನು ಥಟ್ಟನೆ ತೆಗೆಯಿತು. ಆಶ್ ಧರೆಗುರುಳಿದ. ಇದ್ದಕ್ಕಿದ್ದಂತೆ ಸ್ಟೇಷನ್ ತುಂಬಾ ಜನರ ಕೋಲಾಹಲ. ಜನ ಅತ್ತಿತ್ತ ಚೆಲ್ಲಾಪಿಲ್ಲಿಯಾಗಿ ಓಡಾಡಲು ಶುರುಮಾಡಿದರು. ಗುಂಡು ಹೊಡೆದ ಯುವಕ ಒಂದೆರಡು ನಿಮಿಷ ಅಲ್ಲೇ ನಿಂತು, ಆಶ್‌ನ ಪ್ರಾಣ ಹೋಗಿದ್ದನ್ನು ಖಾತ್ರಿ ಮಾಡಿಕೊಂಡು ನಂತರ ನಿರ್ಭೀತನಾಗಿ, ಬೋಗಿಯಿಂದ ಕೆಳಗಿಳಿದ. ಇಳಿದವನೇ ನಿಲ್ದಾಣದ ಶೌಚಾಲಯಕ್ಕೆ ಹೋಗಿ, ತನ್ನದೇ ಪಿಸ್ತೂಲಿನಿಂದ ತನ್ನ ಬಾಯಿಯಲ್ಲಿ ತಾನೇ ಗುಂಡು ಹೊಡೆದುಕೊಂಡು ಹುತಾತ್ಮನಾಗಿಯೇ ಬಿಟ್ಟ. ರಕ್ತದ ಮಡುವಿನಲ್ಲಿ ಬಿದ್ದಿದ್ದ ಅವನ ಶವವನ್ನು ನಂತರ ಪೊಲೀಸರು ತೆಗೆದುಕೊಂಡು ಹೋಗಿ ವಿಚಾರಣೆ ನಡೆಸಲು ಪ್ರಾರಂಭಿಸಿದರು.

ಅವನ ಹೆಸರು "ವಾಂಚಿನಾಥ್ ಅಯ್ಯರ್". ತಿರುವನ್ನ್ವೇಲಿ ಜಿಲ್ಲೆಯ ಸೆಂಗೊತ್ತೈ ಊರಿನವನು. ಅವನು ಪ್ರಾಥಮಿಕ ಶಿಕ್ಷಣವನ್ನು ತನ್ನೂರಿನಲ್ಲೇ ಮುಗಿಸಿ, ಎಂ.ಎ ಪದವಿಯನ್ನು ತಿರುವನಂತಪುರದ ಕಾಲೇಜಿನಲ್ಲಿ ಪಡೆದಿದ್ದ. ಸರ್ಕಾರಿ ಹುದ್ದೆಯಲ್ಲಿ ನೌಕರಿ ಮಾಡುತ್ತಿದ್ದ. ಹೀಗೆ ತನ್ನ ಬದುಕು ಸಾಗಿಸುತ್ತಿದ್ದ ಇವನ ಮೇಲೆ ಅಪಾರ ಪ್ರಭಾವ ಬೀರಿದ್ದು ಬಿಪಿನ್ ಚಂದ್ರಪಾಲರು. ಪಾಲರ ಅನೇಕ ಭಾಷಣಗಳನ್ನು ಕೇಳಿ ವಾಂಚಿ ಉದ್ದೀಪಿತನಾಗಿದ್ದ. ಈ ಪಾಲರ ಜೊತೆಗೆ ಇನ್ನೊಬ್ಬ ದೇಶಪ್ರೇಮಿಯೊಬ್ಬರು ಕೈಗೂಡಿಸಿದ್ದರು. ವಿ.ಓ.ಚಿದಂಬರಂ ಪಿಳ್ಳೈ. ಸಶಸ್ತ್ರ ಕ್ರಾಂತಿಯಿಂದಲೇ ಸ್ವಾತಂತ್ರ್ಯವೆಂದು ನಂಬಿದ್ದ ಪಿಳ್ಳೈ, ಶಸ್ತ್ರಗಳ ತಯಾರಿಕೆಗೆ ಸಹಾಯ ಮಾಡ್ತಿದ್ರು. ಅಲ್ಲದೆ ಬ್ರಿಟಿಷರಿಗೆ ಸೆಡ್ಡು ಹೊಡೆಯಲು ತಮ್ಮದೇ ಆದ "ಸ್ವದೇಶೀ ನೇವಿಗೇಶನ್"ಎಂಬ ಸ್ವತಂತ್ರ ಹಡಗು ಸಂಸ್ಥೆಯನ್ನೂ ಸ್ಥಾಪಿಸಿದ್ದರು.

ಪಿಳ್ಳೈ ಅವರ ಇಷ್ಟೆಲ್ಲಾ ಕಾರ್ಯಗಳನ್ನು ನೋಡಿಕೊಂಡು ಆಂಗ್ಲರಿಗೆ ಸುಮ್ಮನಿರಲಾಗಲಿಲ್ಲ. ಇವರನ್ನು ಹತ್ತಿಕ್ಕಲೆಂದೇ ಕಲೆಕ್ಟರ್ ಆಶ್ ವಿಶೇಷ ಮುತುವರ್ಜಿ ವಹಿಸಿದ್ದ. ಪಿಳ್ಳೈ ಅವರ ಮೇಲೆ ಅನೇಕ ಕೇಸ್ ಗಳನ್ನು ಹಾಕಿದ. ಅವರ ನೇವಿಗೇಶನ್ ಸಂಸ್ಥೆಯನ್ನೂ ಮುಳುಗಿಸಿಬಿಟ್ಟ. ಇದಕ್ಕಾಗಿ ತನ್ನ ಮೇಲಧಿಕಾರಿಗಳ



ಶಹಬ್ಬಾಸನ್ನೂ ಪಡೆದಿದ್ದ.ಇವೆಲ್ಲ ಕಾರಣಗಳಿಗಾಗಿ, ಆಶ್ ಅಲ್ಲಿನ ಯುವಕರ ಕೆಂಗಣ್ಣಿಗೆ ಗುರಿಯಾಗಿದ್ದ. ಪಿಳ್ಳೈ ಅಂತಹ ವ್ಯಕ್ತಿಯನ್ನು ಮುಳುಗಿಸಿದ, ಆಶ್‌ನನ್ನೂ ಮುಗಿಸಬೇಕೆಂಬ ಭಾವನೆ ಎಲ್ಲರಲ್ಲೂ ಕೆಂಡದಂತೆ ಜ್ವಲಿಸುತ್ತಿತ್ತು. ವಾಂಚಿ ಆ ಕಾರ್ಯವನ್ನು ಮಾಡಿದ್ದ.

ವಾಂಚಿ ಹುತಾತ್ಮನಾದ ಮೇಲೆ, ಅವನ ಮನೆಯನ್ನು ತಡಕಾಡಿದ ಪೊಲೀಸರಿಗೆ ಇನ್ನಷ್ಟು ಮಾಹಿತಿಗಳೂ ದೊರಕಿದವು. ಅಲ್ಲದೆ ವಾಂಚಿಯ ಜೊತೆಗೆ ನಿಕಟ ಸಂಬಂಧ ಹೊಂದಿದ್ದ ಅರುಮುಘಂ ಪಿಳ್ಳೈನನ್ನು ಬಂಧಿಸಲಾಯಿತು. ಅವನು ತನ್ನ ತಪ್ಪೊಪ್ಪಿಕೊಂಡು ಅಪ್ರೂವರ್ ಆಗಿಬಿಟ್ಟ. ಅವನ ಮೂಲಕ ಈ ಆಶ್‌ನ ಕೊಲೆಯ ಸಂಪೂರ್ಣ ರೂಪುರೇಷೆ ಪೊಲೀಸರಿಗೆ ಗೊತ್ತಾಗಿಹೋಯಿತು. ಹೀಗಾಗಿ ಸಂಬಂಧಪಟ್ಟ ವ್ಯಕ್ತಿಗಳ ಶೋಧನೆಯಲ್ಲಿ ಪೊಲೀಸರು ತೊಡಗಿದರು.ಅಂತೂ ಕೊನೆಗೆ ಒಟ್ಟು 14 ಮಂದಿಯನ್ನು ಪೊಲೀಸರು ಬಂಧಿಸಿದರು. ಎಲ್ಲರನ್ನೂ ಮದ್ರಾಸಿನ ಹೈಕೋರ್ಟ್‌ಗೆ ಹಾಜರಿ ಪಡಿಸಲಾಯಿತು. ತ್ರಿಸದಸ್ಯ ಪೀಠದ ನ್ಯಾಯಾಲಯದಲ್ಲಿ ವಿಚಾರಣೆ ನಡೆಯಲು ಪ್ರಾರಂಭವಾಯಿತು.

ವಾಂಚಿ ಆಶ್‌ನನ್ನು ಸಂಹಾರ ಮಾಡಿದ್ದರೂ, ಆ ಕೃತ್ಯದ ಮೂಲ ಸೂತ್ರಧಾರನೇ 'ನೀಲಕಂಠ ಬ್ರಹ್ಮಚಾರಿ'. ನೀಲಕಂಠ ಮೊದಲಿಂದಲೂ ರಾಷ್ಟ್ರದ ಸ್ವಾತಂತ್ರ್ಯದ ಕನಸು ಕಾಣುತ್ತಿದ್ದ ವ್ಯಕ್ತಿ. ಆಗ ದಕ್ಷಿಣದಲ್ಲಿ ಕ್ರಾಂತಿಕಾರಿಗಳಿಗೆ ಹೇಳಿ ಮಾಡಿಸಿದ ಜಾಗವೆಂದರೆ 'ಪಾಂಡಿಚೆರಿ'. ಫ್ರೆಂಚರ ತಾಣವಾಗಿದ್ದ ಇದೆ ಪಾಂಡಿಚೆರಿಯೇ ಅರವಿಂದ ಘೋಷ್, ವಿ.ವಿ.ಎಸ್.ಅಯ್ಯರ್, ಮಹಾಕವಿ ಸುಬ್ರಹ್ಮಣ್ಯ ಅಯ್ಯರ್ ಇಂತಹ ಅದ್ಭುತ ರಾಷ್ಟ್ರಪ್ರೇಮಿಗಳ

ಪುಟ 9 ಕ್ಕೆ ➢

➢ ಪುಟ 6 ರಿಂದ..... ಕಲಿಕೆಯ ದಾರಿಗಳು...

ಸ್ವಭಾವನ್ನು ಪರಿಚಯಿಸುತ್ತದೆ. ನೀನು ಹಾಗೆ ಮಾಡಿಲ್ಲ, ಸಂತೋಷ" ಎಂದಿದ್ದರು. ತಮ್ಮ ಕೆಲಸದ ನಡುವೆಯೂ ಅಷ್ಟು ಸಣ್ಣ ಸಂಗತಿಯನ್ನು ಗಮನಿಸಿದ್ದರು ಮತ್ತು ಅದನ್ನು ಮೆಚ್ಚಿ ಮುಕ್ತವಾಗಿ ಪ್ರಶಂಸಿಸಿದ ಆ ದೊಡ್ಡ ಗುಣವನ್ನು ಕಂಡು ಹೃದಯ ತುಂಬಿಬಂದಿತ್ತು. ನಮ್ಮ ಪ್ರತಿಯೊಂದು ನಡವಳಿಕೆಯನ್ನು ಎಚ್ಚರಿಕೆಯಿಂದ ಪರಿಷ್ಕರಿಸಿ ಕೊಳ್ಳುತ್ತಿರಬೇಕೆಂಬ ಪ್ರಜ್ಞೆ ಜಾಗೃತಗೊಂಡಿತ್ತು. ಇದೂ ಕಲಿಕೆಯ ಅಂಗವೇ.

ಅಂದೊಮ್ಮೆ ಆಕಸ್ಮಿಕವಾಗಿ ರಾಮಕೃಷ್ಣಾಶ್ರಮದ ಆವರಣದ ಒಳಹೊಕ್ಕ ನಾನು, ನನ್ನ ಗೆಳತಿ ಅಲ್ಲಿನ ಧ್ಯಾನಮಂದಿರವನ್ನು ನೋಡಲು ಹೋದೆವು. ಒಳಗೆ ಸ್ವಾಮೀಜಿ ಧ್ಯಾನದಲ್ಲಿದ್ದರು. ಅವರನ್ನು ಮಾತನಾಡಿಸುವ ಆಸೆಯಿಂದ ಅವರು ಎಚ್ಚರಗೊಳ್ಳುವವರೆಗೆ ಅಲ್ಲಿಯೇ ಕಾಯುತ್ತ ಕುಳಿತಿದ್ದೆವು. ನಂತರ ನಮಸ್ಕರಿಸಿದಾಗ ತುಂಬ ವಿಶ್ವಾಸದಿಂದ ಮಾತನಾಡಿಸಿ ಅಲ್ಲಿನ ಗ್ರಂಥಾಲಯವನ್ನು ನೋಡಿ ಬರಲು ಹೇಳಿದ್ದಲ್ಲದೆ ಭೋಜನಾಲಯಕ್ಕೆ ಸಂಬಂಧಿಸಿದವರನ್ನು ಕರೆದು ನಮ್ಮಿಬ್ಬರಿಗೂ ಪ್ರಸಾದ ನೀಡುವಂತೆ ಸೂಚಿಸಿದರು. ಕಡೆಗೆ ನಾವು ಅಲ್ಲಿಂದ ಹೊರಡುವ ಮುನ್ನ ಮತ್ತೆ ಅವರನ್ನು ಕಂಡಾಗ ಇಬ್ಬರಿಗೂ ಸ್ವಾಮಿವಿವೇಕಾನಂದರ 'ಜೀವನ ಚರಿತ್ರೆ' ಪುಸ್ತಕಗಳನ್ನು ಕೊಟ್ಟು ಆಶೀರ್ವದಿಸಿ ಕಳುಹಿಸಿದ್ದರು. 'ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ' ಎಂಬ ಮಾತಿನ ಸಾಕ್ಷಾತ್ಕಾರವೇ ಅಂದು ನಮಗಾಗಿತ್ತು. ಸಜ್ಜನರನ್ನು ಕಾಣುವ ಅವಕಾಶಗಳು ದೊರೆತಾಗ ತಪ್ಪಿಸಬಾರದೆಂಬ ಮಾತನ್ನು ಎಂದೂ ಮರೆಯದಂತಾಗಿತ್ತು. ಧನ್ಯತೆಯ ಭಾವದೊಂದಿಗೆ ಅಲ್ಲಿಂದ ಹೊರಟಿದ್ದೆವು.

ಕಲಿಕೆಯ ದಾರಿಗಳು ಇಂದೂ ನಮ್ಮ ವಿಜ್ಞಾನದ ಕೊಡುಗೆಗಳಿಂದ ಅನೇಕ ಪ್ರಕಾರಗಳಲ್ಲಿ ತೆರೆದುಕೊಂಡಿವೆ ನಿಜ. (ಇಂಟರ್ನೆಟ್) ಅಂತರ್ಜಾಲದ ಮುಖಾಂತರ ಇಡೀ ಜಗತ್ತಿನ ಆಗುಹೋಗುಗಳಿಗೆ ಸಂಬಂಧಿಸಿದ ನೂರಾರು, ಸಾವಿರಾರು ಸಂಗತಿಗಳನ್ನು ನಾವು ಕುಳಿತಲ್ಲೇ ತಿಳಿದುಕೊಳ್ಳಬಹುದು ಸರಿ. ಆದರೆ ಇವೆಲ್ಲ ನಮ್ಮಲ್ಲಿನ ಮಾಹಿತಿಕಣಜವನ್ನು ತುಂಬುತ್ತವಲ್ಲದೆ ನೇರವಾಗಿ ನಮ್ಮ ಮೇಲೆ ಪ್ರಭಾವ ಬೀರುವಂತಹವರ ಸಂಪರ್ಕ, ಸಾನ್ನಿಧ್ಯದಿಂದ ದೊರಕುವ ಪ್ರಯೋಜನವನ್ನು ನೀಡುವುದಿಲ್ಲ. ಅದಕ್ಕೇ ಹಿರಿಯರು ಹೇಳಿರುವ " ದೇಶ ಸುತ್ತು, ಕೋಶ ಓದು" ಎಂಬ ಮಾತಿನಲ್ಲಿ ಅಡಗಿರುವ ಮೌಲ್ಯ ಎಲ್ಲಕ್ಕಿಂತ ದೊಡ್ಡದೆನಿಸಿರುವುದು. "ಯಾವುದೇ ಒಂದು ಊರಿಗೆ ಹೋದರೆ ಅಲ್ಲಿನ ನಿವಾಸಿಗಳಲ್ಲಿ ಅತ್ಯಂತ ಹಿರಿಯರಾದವರನ್ನು ಒಮ್ಮೆ ಕಂಡು ಬನ್ನಿ. ಊರಿಗೆ ಸಂಬಂಧಿಸಿದ ಎಷ್ಟೋ ಸಂಗತಿಗಳು ಸಾಂಸ್ಕೃತಿಕವೋ, ಐತಿಹಾಸಿಕವೋ ಯಾವುದೇ ಆಗಲಿ ಅವರಿಗೆ ತಿಳಿದಿರುವ ಸಂಭವವಿರುತ್ತದೆ ಮತ್ತು ಅಲ್ಲಿನ ಪ್ರಸಿದ್ಧ ಸಮಾಜಮುಖೀ ವ್ಯಕ್ತಿಗಳನ್ನು ಕಂಡು ಬನ್ನಿ. ಎಷ್ಟೋ ವಿಷಯಗಳನ್ನು ತಿಳಿಯುವ ಅವಕಾಶಗಳು ಒದಗುತ್ತವೆ ಎಂದು ನನ್ನ ಗುರುಗಳು ಸದಾ ಹೇಳುತ್ತಿದ್ದ ಮಾತುಗಳನ್ನು ಇಂದಿಗೂ ಪಾಲಿಸುವ ಪ್ರಯತ್ನವನ್ನು ಮಾಡುತ್ತೇವೆ. ಅದು ಫಲಪ್ರದವೂ ಆಗುತ್ತದೆ.

ಈ ಎಲ್ಲ ಹಿನ್ನೆಲೆಯೊಂದಿಗೆ ಕಲಿಕೆಯ ಹಲವು ಮಾರ್ಗಗಳು ಯಾವ ಯಾವ ರೀತಿಯಲ್ಲಿ ನಮಗೆ ನೆರವಾಗುತ್ತದೆಂಬುದು ಸ್ಪಷ್ಟವಾಗುತ್ತದಲ್ಲವೆ? ನಾವು ಕೇವಲ "ಮಾಹಿತಿ ಕಣಜ" ವಾಗುವುದಕ್ಕಿಂತ ಸುಸಂಸ್ಕೃತ ವ್ಯಕ್ತಿಯಾಗಿ ರೂಪುಗೊಳ್ಳುವುದು ಮುಖ್ಯ ತಾನೆ?

●

➢ ಪುಟ 8 ರಿಂದ..... ಸಂಘಟನೆ...

ಆವಾಸವಾಗಿತ್ತು. ನೀಲಕಂಠನೂ ಇಲ್ಲಿಯೇ ಆಶ್ರಯ ಪಡೆದಿದ್ದು. ಪತ್ರಿಕೋದ್ಯಮಿ ಆಗಿದ್ದ ಇವನು ಬ್ರಿಟಿಷರ ವಿರುದ್ಧ "ಸೂರ್ಯೋದಯ"ವೆಂಬ ಪತ್ರಿಕೆ ಹೊರತರುತ್ತಿದ್ದ. ಆಂಗ್ಲರ ದುಷ್ಕೃತ್ಯಗಳು, ಭಾರತದ ಸ್ವಾತಂತ್ರ್ಯ ಮುಂತಾದ ವಿಚಾರಗಳ ಬಗ್ಗೆ ಅದ್ಭುತ ಬರಹಗಳನ್ನು ಬರೆಯುತ್ತಿದ್ದ.

ನೀಲಕಂಠ, "ಭಾರತಮಾತಾ ಅಸೋಸಿಯೇಷನ್" ಎಂಬ ಸಂಘಟನೆಯನ್ನೂ ರಹಸ್ಯವಾಗಿ ಪ್ರಾರಂಭಿಸಿದ್ದ. ದಕ್ಷಿಣ ಭಾರತದ ಕೆಲವೇ ಕೆಲವು ಕ್ರಾಂತಿಕಾರಿ ಸಂಘಟನೆಗಳಲ್ಲಿ ಇದೂ ಒಂದು. ಈ ಸಂಸ್ಥೆ ಸಶಸ್ತ್ರ ಕ್ರಾಂತಿಗಾಗಿ ಯುವಕರನ್ನು ತರಬೇತಿಗೊಳಿಸುತ್ತಿತ್ತು. ಆಶ್‌ನ ಹೇಯ ಕೃತ್ಯಗಳಿಂದ ತಪ್ತನಾಗಿದ್ದ ವಾಂಚಿಗೆ ಹೆಗಲಾಗಿದ್ದು ಇದೇ ಸಂಸ್ಥೆ. ಈ ಸಂಸ್ಥೆಯ ಜೊತೆಗೂಡಿದ ವಾಂಚಿ ಹಿಂತಿರುಗಿ ನೋಡಲಿಲ್ಲ. 1910 ಡಿಸೆಂಬರ್ ನಲ್ಲಿ ಪ್ಯಾರಿಸ್ ನಿಂದ ಬಂದ ವಿ.ವಿ.ಎಸ್.ಅಯ್ಯರ್ ಯುವಕರಿಗೆ ಗುಂಡು ಹೊಡೆಯುವ ತರಬೇತಿ ಶುರು ಮಾಡಿದರು.. ಅಲ್ಲಿಂದ ಆಶ್ ನ ಹತ್ಯೆಯ ನಕ್ಷೆ ಸಿದ್ಧವಾಯಿತು.

ನ್ಯಾಯಾಲಯದಲ್ಲಿ ದೀರ್ಘ ವಿಚಾರಣೆ ನಡೆಯಿತು. ಆದರೆ ವಾಂಚಿ ಅದಾಗಲೇ ಮೃತನಾದ್ದರಿಂದ, ಹಾಜರುಪಡಿಸಿದ 14 ಆರೋಪಿಗಳ ಮೇಲೆ ನೇರವಾಗಿ ಕೊಲೆಯ ಆರೋಪ ಹೊರಿಸಲು ಯಾವ ಸಾಕ್ಷ್ಯಗಳೂ ಸಿಗಲೇ ಇಲ್ಲ. ಆದರೂ, ಆಂಗ್ಲ ಪ್ರಭುತ್ವದ ವಿರುದ್ಧ ದಂಗೆದ್ದ ಕಾರಣಕ್ಕೆ ಶಿಕ್ಷೆ ವಿಧಿಸಲಾಯಿತು. ನೀಲಕಂಠನಿಗೆ ಏಳು ವರ್ಷಗಳ ಕಠಿಣ ಕಾರಾಗೃಹವಾಸ ವಿಧಿಸಿದರು. ಜೈಲಿನಿಂದ ಹೊರಬಂದ ನೀಲಕಂಠನ ಮನಸ್ಸು ಅಧ್ಯಾತ್ಮದತ್ತ ಹೊರಳಿತ್ತು. ಥೇಟ್ ನಮ್ಮ ಅರವಿಂದರ ಹಾಗೆ. ನೀಲಕಂಠ "ಸದ್ಗುರು ಓಂಕಾರ"ಎಂಬ ಹೆಸರಿನೊಂದಿಗೆ ಸನ್ಯಾಸಿಯಾದ. ಆಧ್ಯಾತ್ಮದಲ್ಲೇ ಭಾರತವನ್ನು ಅನವರತ ಧ್ಯಾನಿಸುತ್ತಿದ್ದ.

ಡಿಸೆಂಬರ್ 4, ಆ ನೀಲಕಂಠ ಹುಟ್ಟಿದ ದಿನ.. ದಕ್ಷಿಣ ಭಾರತದ ಏಕೈಕ ಹುತಾತ್ಮನನ್ನು ಹುಟ್ಟುಹಾಕಿದ ಕೀರ್ತಿ ನೀಲಕಂಠನದ್ದು. ಯಾವುದೇ ಫಲಾಪೇಕ್ಷೆಯಿಲ್ಲದೆ ನಿರ್ವಾಜದಿಂದ ರಾಷ್ಟ್ರವನ್ನು ಪ್ರೀತಿಸಿದ, ಅದಕ್ಕಾಗಿ ಎಲ್ಲ ಕಷ್ಟಗಳನ್ನೂ ಸ್ವೀಕರಿಸಿದ ಇಂತಹ ವೀರರು ನಮಗೆ ಆದರ್ಶವಾಗಿರಲಿ. ಬಹುತೇಕ ಎಲ್ಲ ಪಠ್ಯಗಳಿಂದ, ಜನರ ಮಾನಸದಿಂದ ಮರೆಯಾಗಿ ಹೋದ ಇವರನ್ನು ಕಡೆಪಕ್ಷ ನಾವಾದರೂ ನೆನೆಯೋಣ..

**ವಂದೇ ಮಾತರಂ..!!**

●

- **ಮನಸ್ಸು ಏಕಾಗ್ರವಾಗದಿದ್ದರೂ ಪವಿತ್ರ ನಾಮ ಜಪವನ್ನು ಮಾತ್ರ ಬಿಡಬೇಡ. ನಿನ್ನ ಕರ್ತವ್ಯವನ್ನು ನೀನು ಮಾಡು. ನಾಮ ಜಪ ಮಾಡುವಾಗ ಮನಸ್ಸು ಗಾಳಿಯಿಲ್ಲದ ಪ್ರದೇಶದಲ್ಲಿಟ್ಟ ದೀಪದಂತೆ ಅಲುಗಾಡದೆ ಸ್ಥಿರವಾಗಿರುವುದು. ದೀಪ ಅಲುಗಾಡುವಂತೆ ಮಾಡುವುದು ಗಾಳಿ. ಅದೇ ರೀತಿ ನಮ್ಮ ಬಯಕೆ, ವಾಸನೆಗಳು ಮನಸ್ಸನ್ನು ಚಂಚಲಗೊಳಿಸುವುವು.**

**– ಶ್ರೀಮಾತೆ ಶಾರದಾದೇವಿ**

# ರಾಜ್ಯಮಟ್ಟದ ಸಂಸ್ಕೃತ ಶಿಕ್ಷಕರ ಸಮಾವೇಶ

ಕರ್ನಾಟಕ ರಾಜ್ಯ ಪ್ರೌಢಶಾಲಾ ಸಂಸ್ಕೃತ ಅಧ್ಯಾಪಕ ಸಂಘ (ರಿ) ಹಾಗೂ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ (ರಿ) ಇವರ ಸಹಯೋಗದಲ್ಲಿ ದಿನಾಂಕ 29-11-2018 ರಂದು ಬೆಂಗಳೂರಿನಲ್ಲಿರುವ ಯಾದವಸ್ಮೃತಿ ಸಭಾಭವನದಲ್ಲಿ ಒಂದು ದಿನದ ಪ್ರೌಢಶಾಲಾ ಸಂಸ್ಕೃತ ಶಿಕ್ಷಕರ ರಾಜ್ಯಮಟ್ಟದ ಸಮಾವೇಶ ನಡೆಯಿತು. ಖ್ಯಾತ ಶಿಕ್ಷಣತಜ್ಞರು ಹಾಗೂ ಮಾಜಿ ವಿಧಾನಪರಿಷತ್ ಸದಸ್ಯರಾದ ಶ್ರೀಯುತ ಪ್ರೊ. ಕೃ. ನರಹರಿಯವರು ದೀಪ ಬೆಳಗುವುದರ ಮೂಲಕ ಸಮಾವೇಶಕ್ಕೆ ಚಾಲನೆ ನೀಡಿದರು. ಶ್ರೀಯುತರು ತಮ್ಮ ಉದ್ಘಾಟನಾ ಭಾಷಣದಲ್ಲಿ ಹಿಂದಿನಿಂದಲೂ ಸಂಸ್ಕೃತ ಭಾಷಾ ಶಿಕ್ಷಣಕ್ಕೆ ತಮ್ಮ ಸಂಘವು ವಿಶೇಷ ಮಹತ್ವವನ್ನು ಕೊಡುತ್ತಾ ಬಂದಿದೆ. ಪ್ರಸ್ತುತ ಸನ್ನಿವೇಶದಲ್ಲಿ ಸಂಸ್ಕೃತ ಶಿಕ್ಷಕರ ಕರ್ತವ್ಯ ಮತ್ತು ಸಂಘಟನೆಯ ಮಹತ್ತ್ವವನ್ನು ತಿಳಿಸಿದರು.

ವಿಶೇಷ ಸಂಪನ್ಮೂಲವ್ಯಕ್ತಿಗಳಾದ ವಿದ್ವಾನ್ ವೆಂಕಟ್ರಮಣ ಭಟ್ಟ, ಮೈಸೂರು ಇವರು ಪ್ರಶ್ನೆಪತ್ರಿಕೆಯ ನೀಲನಕ್ಷೆ ಹಾಗೂ ಸ್ವರೂಪವನ್ನು ವಿವರಿಸಿದರು. ಮುಂದಿನ ಅವಧಿಯಲ್ಲಿ ಪ್ರಸ್ತುತ ವಿಧಾನ ಪರಿಷತ್ ಸದಸ್ಯರಾದ ಶ್ರೀ ಅರುಣ್ ಶಹಾಪೂರರವರೊಂದಿಗೆ ಈಗ ಸಂಸ್ಕೃತ ಭಾಷಾ ಶಿಕ್ಷಣಕ್ಕೆ ಎದುರಾದ ಸವಾಲುಗಳು ಮತ್ತು ಪರಿಹಾರದ ಬಗ್ಗೆ ಸಂವಾದ ನಡೆಯಿತು. ಭಾಷಾ ಸಂಯೋಜನೆಯ ಕುರಿತು ಸಂಘದ ಅಧ್ಯಕ್ಷರಾದ ಶ್ರೀ ನಾರಾಯಣ ಭಟ್ಟರವರು ಮಾನ್ಯ ಶಾಸಕರಿಗೆ ಮನವರಿಕೆ ಮಾಡಿಕೊಟ್ಟರು. ಪ್ರಥಮ ಭಾಷೆ-ಸಂಸ್ಕೃತ, ದ್ವಿತೀಯ ಭಾಷೆ-ಕನ್ನಡ, ತೃತೀಯ ಭಾಷೆ- ಇಂಗ್ಲೀಷ್ ಈ ಭಾಷಾ ಸಂಯೋಜನೆಯ ಬಗ್ಗೆ ಸಂಬಂಧಿಸಿದ ಶಿಕ್ಷಣ ಇಲಾಖೆಯ ಅಧಿಕಾರಿಗಳಿಂದ ಆದೇಶವು ಜಾರಿಯಾಗುವಂತೆ ಆಗ್ರಹಿಸಿ ಸಂಘದ ವತಿಯಿಂದ ಮನವಿಯನ್ನು ಶಾಸಕರಿಗೆ ನೀಡಲಾಯಿತು. ಮನವಿಗೆ ಸ್ಪಂದಿಸುವುದಾಗಿ ಶ್ರೀ ಅರುಣ್ ಶಹಾಪೂರರವರು ಭರವಸೆ ನೀಡಿದರು.

ಮಾಧ್ಯಮಿಕ ಶಿಕ್ಷಕ ಸಂಘದ ಮಹಿಳಾ ವಿಭಾಗದ ಪ್ರಮುಖರಾದ ಶ್ರೀಮತಿ ಸೀತಾಲಕ್ಷ್ಮೀರವರ ಅಧ್ಯಕ್ಷತೆಯಲ್ಲಿ ಸಮಾರೋಪ ಸಂಪನ್ನಗೊಂಡಿತು. ಕರ್ನಾಟಕ ಸಂಸ್ಕೃತ ಶಿಕ್ಷಕ ನಿರ್ದೇಶನಾಲಯದ ಮಾನ್ಯ ನಿರ್ದೇಶಕರಾದ ಪ್ರೊ. ವಿ. ಗಿರೀಶ್ಚಂದ್ರ (ಡೀನ್) ರವರು ಮುಖ್ಯ ಅಭ್ಯಾಗತರಾಗಿ ಭಾಗವಹಿಸಿ, ಸಂಸ್ಕೃತ ಶಿಕ್ಷಕ ಸಂಘದ ಕಾರ್ಯ ಚಟುವಟಿಕೆಗಳನ್ನು ಶ್ಲಾಘಿಸಿದರು. ಅಲ್ಲದೇ ಸಂಸ್ಕೃತ ವಿಶ್ವವಿದ್ಯಾನಿಲಯದ ವತಿಯಿಂದ ಪ್ರೌಢಶಾಲಾ ಸಂಸ್ಕೃತ ಭಾಷಾ ಶಿಕ್ಷಣಕ್ಕೆ ಸಂಪೂರ್ಣ ಸಹಕಾರ ನೀಡುವುದಾಗಿ ವಚನವಿತ್ತರು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಚಿದಾನಂದ ಪಾಟೀಲರವರು ಹಾಗೂ ಕೋಶಾಧ್ಯಕ್ಷರಾದ ಶ್ರೀ ಜೆ.ಎಮ್.ಜೋಶಿರವರು ಮತ್ತು ಕಾರ್ಯಾಲಯ ಪ್ರಮುಖರಾದ ಶ್ರೀ ಜಿ.ಎಸ್. ಕೃಷ್ಣಮೂರ್ತಿಯವರು ಸಮಾವೇಶದಲ್ಲಿ ಉಪಸ್ಥಿತರಿದ್ದು ಸೂಕ್ತ ಮಾರ್ಗದರ್ಶನ ನೀಡಿದರು. ಕರ್ನಾಟಕರಾಜ್ಯ ಪ್ರೌಢಶಾಲಾ ಸಂಸ್ಕೃತ ಅಧ್ಯಾಪಕ ಸಂಘದ ವಿವಿಧ ಪದಾಧಿಕಾರಿಗಳು ಉಪಸ್ಥಿತರಿದ್ದರು. ಈ ಸಮಾವೇಶಕ್ಕೆ ರಾಜ್ಯದ 21 ಜಿಲ್ಲೆಗಳಿಂದ 120 ಕ್ಕೂ ಹೆಚ್ಚು ಪ್ರೌಢಶಾಲಾ ಸಂಸ್ಕೃತ ಶಿಕ್ಷಕರು ಆಗಮಿಸಿ, ಭಾಷಾ ಶಿಕ್ಷಣದ ಬಗ್ಗೆ ವಿಸ್ತೃತವಾದ ಚರ್ಚೆಯಲ್ಲಿ ಭಾಗವಹಿಸಿದರು.

**ವರದಿ : ವಿದ್ವಾನ್ ನಾರಾಯಣ ಭಟ್ಟ,**
**ರಾಜ್ಯಾಧ್ಯಕ್ಷರು, ಕ.ರಾ.ಪ್ರೌ.ಸಂ.ಅ.ಸಂಘ**

# ವಿಷಯ ಪುನಃಶ್ಚೇತನ ಕಾರ್ಯಾಗಾರ

ದಿನಾಂಕ 30-11-2018 ರಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಬೆಂಗಳೂರು ಉತ್ತರ ಜಿಲ್ಲಾ ಘಟಕದ ವತಿಯಿಂದ ಒಂದು ದಿನದ ಗಣಿತ ಶಿಕ್ಷಕರಿಗೆ ಪುನಶ್ಚೇತನ ಕಾರ್ಯಾಗಾರವನ್ನು ಎಸ್.ವಿ.ಎನ್. ಆಂಗ್ಲಶಾಲೆ, ನಾಗವಾರ ಇಲ್ಲಿ ಆಯೋಜಿಸಲಾಗಿತ್ತು. ಉದ್ಘಾಟನೆಯನ್ನು ಸಂಘದ ಪೋಷಕರಾದ ಕೃ. ನರಹರಿಯವರು ಉದ್ಘಾಟಿಸಿ ಶಿಕ್ಷಕರು ತಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಇಂತಹ ಪುನಶ್ಚೇತನ ಕಾರ್ಯಾಗಾರಗಳು ಸಹಕಾರಿಯಾಗಲಿ ಎಂದು ತಿಳಿಸಿದರು. ಅಧ್ಯಕ್ಷತೆಯನ್ನು ಎಸ್.ವಿ.ಎನ್. ಶಾಲೆಯ ಸಂಸ್ಥಾಪಕ ಕಾರ್ಯದರ್ಶಿಯವರಾದ ಶ್ರೀ ಸುಬ್ಬರಾಜುರವರು ವಹಿಸಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಕಾರ್ಯಚಟುವಟಿಕೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಉತ್ತರ ಜಿಲ್ಲಾ ಘಟಕದ ಅಧ್ಯಕ್ಷರಾದ ಶ್ರೀ ಎಸ್. ಜಿ. ತಾಂಬೆರವರು ಪ್ರಾಸ್ತಾವಿಕ ನುಡಿಗಳನ್ನು ಆಡಿದರು. ವಿಷಯ ತಜ್ಞರಾದ ಶ್ರೀ ಸುಬ್ರಮಣಿಯವರು ಕಾರ್ಯಾಗಾರವನ್ನು ನಡೆಸಿಕೊಟ್ಟರು.

ಮಧ್ಯಾಹ್ನದ ಅವಧಿಯನ್ನು ಸಮಾಜ ಸೇವಕರು, ಮಾಜಿ ಶಾಸಕರು ಆದ ರಾಜಣ್ಣನವರು ಭಾಗವಹಿಸಿ ನೈಸರ್ಗಿಕ ಆಹಾರ ಪದ್ಧತಿಯಿಂದ ದೊರೆಯುವ ಅನುಕೂಲಗಳು ಮತ್ತು ಮಾತೆಯರ ಪಾತ್ರದ ಬಗ್ಗೆ ಶಿಕ್ಷಕರಿಗೆ ಬಹುಸುಂದರವಾಗಿ ವಿವರಿಸಿದರು. ಮಕ್ಕಳ ಬೆಳವಣಿಗೆ ಮತ್ತು ಅವರು ಕಲಿಕೆಯ ಆಸಕ್ತಿ ಉಂಟುಮಾಡುವಲ್ಲಿ ಗಮನಿಸಬೇಕಾದ ಅಂಶವನ್ನು ತಿಳಿಸಿದರು.

ಸಂಜೆ 4 ಗಂಟೆಗೆ ಸಮಾರೋಪ ನಡೆಸಲಾಯಿತು. ಕಾರ್ಯಾಗಾರದಲ್ಲಿ ಅನುದಾನಿತ, ಸರ್ಕಾರಿ, ಅನುದಾನ ರಹಿತ ಶಾಲೆಯ ಸುಮಾರು 70 ಶಿಕ್ಷಕರು ಭಾಗವಹಿಸಿದ್ದರು. ಕಾರ್ಯಕ್ರಮ ನಿರೂಪಣೆಯನ್ನು ಶಿವಕುಮಾರ ಸ್ವಾಮಿ ನಡೆಸಿಕೊಟ್ಟರು. ಶ್ರೀ ಗಂಗಪ್ಪ ಬೆಂಗಳೂರು ಉತ್ತರ ಜಿಲ್ಲಾ ಕಾರ್ಯದರ್ಶಿ ಹಾಗೂ ಖಜಾಂಚಿಗಳಾದ ಶ್ರೀ ಹರಿದಾಸ್ ಉಪಸ್ಥಿತರಿದ್ದರು.

**ವರದಿ : ಶ್ರೀ ಗಂಗಪ್ಪ**

**ನಾವು ಸ್ವತಃ ಪರಿಶುದ್ಧರಾಗಿರುವುದು, ಇತರರಿಗೆ ಒಳ್ಳೆಯದನ್ನು ಮಾಡುವುದು, ಇದು ಎಲ್ಲ ಪೂಜೆಯ ಸಾರ. ಯಾರು ದೀನರಲ್ಲಿ, ದುರ್ಬಲರಲ್ಲಿ, ರೋಗಿಗಳಲ್ಲಿ ಶಿವನನ್ನು ನೋಡುವರೋ ಅವರೇ ನಿಜವಾಗಿ ಶಿವನನ್ನು ಪೂಜಿಸುವವರು. - ಸ್ವಾಮಿ ವಿವೇಕಾನಂದ**

**ತಾಯಿಯ ಸೇವೆಯೇ ನೀನು ಮಾಡುವ ಅತಿ ದೊಡ್ಡ ಸೇವೆಯೆಂದು ತಿಳಿದುಕೋ.**

# ರಾಜ್ಯಮಟ್ಟದ ಶೈಕ್ಷಣಿಕ ಸಮ್ಮೇಳನ –ಮಾಧ್ಯಮಗಳಲ್ಲಿ

ಹೊಸದಿಗಂತ — ಪ್ರಾದೇಶಿಕ

ರಾಜ್ಯ ಮಟ್ಟದ ಶೈಕ್ಷಣಿಕ ಸಮ್ಮೇಳನ : ವಿಜಯಾನಂದ ಸರಸ್ವತಿ ಸ್ವಾಮೀಜಿ ಹೇಳಿಕೆ

## ಶಿಕ್ಷಕರ ಬೇಡಿಕೆಗಳು ವಿದ್ಯಾರ್ಥಿಗಳ ಭವಿಷ್ಯದ ಹೊರತಾಗಿರಲಿ



### ಶೈಕ್ಷಣಿಕ ವ್ಯವಸ್ಥೆಗೆ ತಂತ್ರಜ್ಞಾನ ಬಳಕೆ ಸವಾಲು



### ಇಲಾಖೆಯ ಆದೇಶದೊಂದಿಗೆ ಸಮಸ್ಯೆಗಳು ಹೊರಡುತ್ತವೆ

### ಶಿಕ್ಷಕ ಸಮುದಾಯದ ಬೇಡಿಕೆ ಈಡೇರಿಕೆಗೆ ರಾಜ್ಯ ಸರ್ಕಾರಗಳು ಮುಂದಾಗಲಿ

ರಾಜ್ಯ ಮಾಧ್ಯಮಿಕ ಶಿಕ್ಷಕರ ಸಂಘದ ರಾಜ್ಯಮಟ್ಟದ ಶೈಕ್ಷಣಿಕ ಸಮ್ಮೇಳನ

## ‘ಪಠ್ಯ ಬದಲಾದರಷ್ಟೇ ಪ್ರಗತಿ ಸಾಧ್ಯ’



## ಸಮರ್ಥ ಶಿಕ್ಷಕ ರಾಷ್ಟ್ರ ರಕ್ಷಕ

ರಾಜ್ಯಮಟ್ಟದ ಶೈಕ್ಷಣಿಕ ಸಮ್ಮೇಳನ | ಮಾಧ್ಯಮಿಕ ಶಿಕ್ಷಕ ಸಂಘದಿಂದ ಆಯೋಜನೆ



## ಶಿಕ್ಷಕರು ಕರ್ತವ್ಯ ಅರಿತು ಕಾರ್ಯನಿರ್ವಹಿಸಲಿ



## ಧರ್ಮಾಧಾರಿತ ಶಿಕ್ಷಣ ಅಗತ್ಯ

ರಾಜ್ಯ ಮಟ್ಟದ ಶೈಕ್ಷಣಿಕ ಸಮ್ಮೇಳನದಲ್ಲಿ ವಿಜಯಾನಂದ ಸರಸ್ವತಿ ಸ್ವಾಮೀಜಿ



### ತಂತ್ರಜ್ಞಾನದ ದುರ್ಬಳಕೆಗೆ ಆತಂಕ ಬೇಡ

## Solve teachers' problems: Seer

Times News Network

Hubballi: Both religion and education play a vital role in building humanity said Vijayanand Saraswathi Swamiji of Ramakrishna Vivekanand Ashram.

He was speaking after inaugurating a state-level academic conference here on Tuesday. "The academic sector is facing some problems and the government should solve them. A teacher's profession is a noble one and students should not suffer due to the demands of teachers," he said.

MLC Arun Shahapur said he would highlight the problems faced by the teacher community at the ongoing legislative session in Belagavi.

He added that the state government had adopted a stepmotherly attitude towards teachers working in Morarji Desai Residential Schools. To solve the problems of teachers a meeting would be convened with the social welfare minister, he added.

MLC A Devegowda, KLE Society director Shankaranna Munavalli, mayor Sudhir Saraf, Shantanna Kadivad and other dignitaries were present at the programme.

MAG(3)/NPP/26/2018-19 Registered No. RNI 45459/85
Date of Publishing : 17-12-2018
Posted at Bangalore PSO Bangalore -560 026
Date of Posting 20h or 21st of every month

# ಚಿತ್ರಸುದ್ದಿ | ಹುಬ್ಬಳ್ಳಿಯಲ್ಲಿ ನಡೆದ ರಾಜ್ಯಮಟ್ಟದ ಶೈಕ್ಷಣಿಕ ಸಮ್ಮೇಳನದ ಚಿತ್ರಗಳು









ರಾಜ್ಯಮಟ್ಟದ ಸಂಸ್ಕೃತ ಶಿಕ್ಷಕರ ಸಮಾವೇಶ

ಗಣಿತ ಶಿಕ್ಷಕರಿಗೆ ಪುನಶ್ಚೇತನ ಕಾರ್ಯಾಗಾರ

**ಗಮನಿಸಿ**

ಶಿಕ್ಷಕ ಸಮಾಚಾರಕ್ಕೆ ಕಾರ್ಯಕ್ರಮ ಮತ್ತು ಚಿತ್ರದ ವರದಿಗಳನ್ನು ಕಾರ್ಯಕ್ರಮ ನಡೆಸಿದ ತಕ್ಷಣವೇ ಕಳುಹಿಸಿ ಕೊಡಿ. ನಿಮ್ಮ ಯಾವುದೇ ಬರಹಗಳು, ವರದಿಗಳನ್ನು 'ನುಡಿ'ಯಲ್ಲಿ ಕಂಪೋಸಿಂಗ್ ಮಾಡಿ ಫೋಟೋ ಸಹಿತ ಪ್ರತಿ ತಿಂಗಳು 5 ನೇ ತಾರೀಖಿನೊಳಗೆ **akss1950@gmail.com** ಇ–ಮೇಲ್‌ಗೆ ಕಳುಹಿಸಿಕೊಡಿ.

IF UNDELIVERED PLEASE RETURN TO SENDER

Printed By :
General Secretary,
Karnataka Rajya Madhyamika Shikshaka Sangha ®.)
Published By:
General Secretary,
Karnataka Rajya Madhyamika Shikshaka Sangha (R.)
Owned By :
Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : General Secretary, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com